www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–10 ಸಂಚಿಕೆ–01 ಜನವರಿ–ಫೆಬ್ರವರಿ 2016
Volume : X Issue : 01 Jan. - Feb. 2016

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

## ಒಳ ಪುಟಗಳಲ್ಲಿ

1. ಪ್ರಕಟಣೆ
2. ಕರ್ತನು ನಿನ್ನೊಂದಿಗಿದ್ದಾನೆ
3. ಪ್ರಾರ್ಥನಾ ಮನವಿಗಳು
4. ಕ್ರಿಸ್ತನಲ್ಲಿರುವ ಜೀವಿತ
4. ಸ್ಥಳೀಯ ಮತ್ತು ವಿದೇಶ ಸುದ್ಧಿ
5. ಆರೋಗ್ಯ ಸ್ವರ
6. ಶಿಷ್ಯರಿಗೆ ಅಭಿಷೇಕ
7. ನೀತಿವಂತನ ಆಶೀರ್ವಾದಗಳು
9. ಮಹಿಳೆಯರ ಸ್ವರ
10. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧವಾದ ನಾಮದಲ್ಲಿ ಪ್ರಿಯ ಸಹೋದರ, ಸಹೋದರಿಯರಿಗೆ ನನ್ನ ವಂದನೆಗಳು ಹಾಗೂ ಹೊಸ ವರ್ಷದ ಶುಭಾಶಯಗಳು.

ಕಳೆದ 2015ರ ವರ್ಷ ಹೇಗೆ ಕಳೆದು ಹೋಯಿತು ನಮಗೆ ಗೊತ್ತಾಗಲೇ ಇಲ್ಲ. ಅನೇಕರ ಜೀವಿತದಲ್ಲಿ ಕಳೆದ ವರ್ಷದ ಕಹಿಯಾದಂತಹ ನೆನಪುಗಳು ಇರಬಹುದು, ಇನ್ನು ಕೆಲವರ ಜೀವಿತದಲ್ಲಿ ಸಿಹಿಯಾದಂತಹ ನೆನಪುಗಳು ಇರಬಹುದು. ಈ ಹೊಸ ವರ್ಷದ ಆರಂಭದಲ್ಲಿ ಕರ್ತನಾದ ಯೇಸುಕ್ರಿಸ್ತನ ಪರಿಶುದ್ಧವಾದ ಕರಗಳಿಗೆ ನಮ್ಮನ್ನೇ ಒಪ್ಪಿಸಿಕೊಡೋಣ. ಆತನು ನಮ್ಮ ಕಹಿಯಾದ ಜೀವಿತವನ್ನು ಸಿಹಿಯನ್ನಾಗಿ ಮಾಡಲು ಶಕ್ತನು. ನಮ್ಮ ಜೀವಿತದ ಮಾರವನ್ನು ಮಧುರವನ್ನಾಗಿ ಮಾಡಬಲ್ಲನು. ಆತನಿಗೆ ಗೊತ್ತಿಲ್ಲದೆ ನಮ್ಮ ಜೀವಿತದಲ್ಲಿ ಏನೂ ಕೂಡ ನಡೆಯುವುದಿಲ್ಲ. ದೇವರು ಈ ಹೊಸ ವರ್ಷದ ಆರಂಭದಲ್ಲಿ ಕೊಡುವ ವಾಗ್ದಾನ ವಾಕ್ಯಗಳನ್ನು ಧ್ಯಾನಿಸೋಣ.

ಹಳೇ ಸಂಗತಿಗಳನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಡಿರಿ, ಪುರಾತನ ಕಾರ್ಯಗಳನ್ನು ಮರೆತುಬಿಡಿ ಇಗೋ ಹೊಸ ಕಾರ್ಯವನ್ನು ಮಾಡುವೆನು. ಈಗ ತಲೆದೋರುತ್ತಲಿವೆ. ನಿಮಗೆ ಕಾಣುವುದಿಲ್ಲವೋ? ನಾನು ಅರಣ್ಯದಲ್ಲಿ ಮಾರ್ಗವನ್ನು ಏರ್ಪಡಿಸಿ ಅಡವಿಯಲ್ಲಿ ನದಿಗಳನ್ನು ಹರಿಸುವೆನು (ಯೆಶಾ. 43:18-19).

ದೇವರು ಹಳೇ ಸಂಗತಿಗಳನ್ನು ಮರೆಯಲು ಹೇಳುತ್ತಿದ್ದಾನೆ, ನಿಮ್ಮ ಹಳೆಯ ಕಹಿ, ದು:ಖ, ನೋವು, ವೇದನೆ ಎಲ್ಲವನ್ನು ಮರೆಯಿರಿ ಕಾರಣ ಕರ್ತನು ನಿಮ್ಮ ಜೀವಿತದಲ್ಲಿ ಹೊಸ ಕಾರ್ಯವನ್ನು ಮಾಡಲು ಹೋಗುತ್ತಿದ್ದಾನೆ. ನಿಮ್ಮ ಜೀವಿತದಲ್ಲಿ ಯಾವುದು ಅಸಂಭವ ಎಂದು ನೀವು ಯೋಚಿಸುತ್ತಿದ್ದೀರೋ ಅದನ್ನೇ ಕರ್ತನು ಸಂಭವವನ್ನಾಗಿ ಮಾಡಲು ಹೋಗುತ್ತಿದ್ದಾನೆ. ಕರ್ತನನ್ನು ಆತುಕೊಳ್ಳಿರಿ, ಆತನನ್ನು ನಂಬಿರಿ, ಆತನನ್ನು ಆಶ್ರಯಿಸಿರಿ.

ನಿನ್ನ ಸೂರ್ಯನು ಇನ್ನು ಮುಣುಗನು, ನಿನ್ನ ಚಂದ್ರನು ತೊಲಗನು, ಯೆಹೋವನೇ ನಿನಗೆ ನಿತ್ಯ ಪ್ರಕಾಶವಾಗಿರುವನು. ನೀನು ದು:ಖಿಸುವ ದಿನಗಳು ಕೊನೆಗಾಣುವವು (ಯೆಶಾ. 60:20). ದೇವರು ನಿಮ್ಮನ್ನು ವಿಶೇಷವಾಗಿ ಆಶೀರ್ವದಿಸಿ ಈ ವರ್ಷ ನಡೆಸಲಿ, ಎಂದು ಹಾರೈಸುತ್ತಾ ನನ್ನೆರಡು ಮಾತುಗಳನ್ನು ಮುಗಿಸುತ್ತೇನೆ.

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಜಯಶಾಲಿಗೆ ಪ್ರತಿಫಲ (ಪ್ರಕ. 3:4–6): ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದಿರುವ ಸ್ವಲ್ಪ ಜನರು ಸಾರ್ದಿಸಿನೊಳಗೆ ನಿನ್ನಲ್ಲಿದ್ದಾರೆ. ಅವರು ಯೋಗ್ಯರಾಗಿರುವುದರಿಂದ ಶುಭ್ರವಸ್ತ್ರಗಳನ್ನು ಧರಿಸಿಕೊಂಡು ನನ್ನ ಜೊತೆಯಲ್ಲಿ ನಡೆಯುವರು. ಜಯಶಾಲಿಗೆ ಹೀಗೆ ಶುಭ್ರವಸ್ತ್ರಗಳನ್ನು ಹೊದಿಸುವರು. ಜೀವಬಾಧ್ಯರ ಪಟ್ಟಿಯಿಂದ ಅವನ ಹೆಸರನ್ನು ನಾನು ಅಳಿಸಿ ಬಿಡದೆ ಅವನು ನನ್ನವನೆಂದು ನನ್ನ ತಂದೆಯ ಮುಂದೆಯೂ ಆತನ ದೂತರ ಮುಂದೆಯೂ ಒಪ್ಪುವೆನು. ದೇವರಾತ್ಮನು ಸಭೆಗಳಿಗೆ ಹೇಳುವುದನ್ನು ಕಿವಿಯುಳ್ಳವನು ಕೇಳಲಿ.

1) **ತಮ್ಮ ವಸ್ತ್ರಗಳನ್ನು ಮೈಲಿಗೆ ಮಾಡಿಕೊಳ್ಳದ ಜನರು** :– ಇದು ನಮ್ಮ ಆತ್ಮೀಕ ವಸ್ತ್ರದ ಕುರಿತಾಗಿ ಹೇಳಲ್ಪಟ್ಟಂತಹ ವಿಚಾರವಾಗಿದೆ.

1. ರಕ್ಷಣೆ ಹೊಂದಿದಾಗ ರಕ್ಷಣೆಯ ವಸ್ತ್ರ ನಮಗೆ ಹೊದಿಸಲ್ಪಟ್ಟಿತು. "ನಾನು ಯೆಹೋವನಲ್ಲಿ ಪರಮಾನಂದಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವುದು; ವರನು ಬಾಸಿಂಗವನ್ನು ಧರಿಸಿಕೊಳ್ಳುವಂತೆಯೂ ವಧುವು ತನ್ನ ಆಭರಣಗಳಿಂದ ಅಲಂಕರಿಸಿಕೊಳ್ಳುವ ಹಾಗೂ ಆತನು ನನಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸಿ ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದ್ದಾನಲ್ಲಾ" (ಯೆಶಾ. 61:10).
2. ರಕ್ಷಣೆ ಹೊಂದಿ ಆತ್ಮೀಕ ಜೀವಿತಕ್ಕೆ ಪ್ರವೇಶಿಸುವಾಗ ಕರ್ತನಾದ ಯೇಸುಕ್ರಿಸ್ತನನ್ನು ಧರಿಸುತ್ತೇವೆ. "ದೇಹದ ಆಶೆಗಳನ್ನು ಪೂರೈಸುವುದಕ್ಕಾಗಿ ಚಿಂತಿಸಿದೆ ಕರ್ತನಾದ ಯೇಸುಕ್ರಿಸ್ತನನ್ನು ಧರಿಸಿಕೊಳ್ಳಿರಿ" (ರೋಮ. 13:14). "ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾ. 3:27).
3. ರಕ್ಷಣೆ ಹೊಂದಿದ ಮೇಲೆ ನಮ್ಮ ಹಳೆಯ ಸ್ವಭಾವದಿಂದ ಬಿಡುಗಡೆ ಹೊಂದಿ ನೂತನ ಸ್ವಭಾವವನ್ನು ಧರಿಸುತ್ತೇವೆ. "ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ ನೂತನ ಸ್ವಭಾವವನ್ನು ಧರಿಸಿಕೊಳ್ಳಿರಿ" (ಎಫೆ. 4:23).
4. ರಕ್ಷಣೆ ಹೊಂದಿದ ಮೇಲೆ ಸದ್ಗುಣಗಳನ್ನು ಧರಿಸಿಕೊಳ್ಳುತ್ತೇವೆ. "ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ ಪ್ರತಿಷ್ಠಿತರೂ ಪ್ರಿಯರೂ ಆಗಿರುವುದರಿಂದ ಕನಿಕರ ದಯೆ ದೀನಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ" (ಕೊಲೊ. 3:12). ಹೀಗೆ ರಕ್ಷಣೆ ಹೊಂದಿದ ನಂತರ ನಾವು ಅನೇಕ ವಿಧವಾದ ಕ್ರಿಸ್ತನಲ್ಲಿರುವ ಆತ್ಮೀಕ ವಸ್ತ್ರಗಳನ್ನು ಧರಿಸಿಕೊಳ್ಳುತ್ತೇವೆ. ಆದರೆ ಯಾವಾಗ ನಾವು ಪಾಪ ಮಾಡುತ್ತೇವೆ ಮತ್ತು ನಮ್ಮ ನಡತೆಯನ್ನು ಕೆಡಿಸಿಕೊಳ್ಳುತ್ತೇವೆ ಅವಾಗ ಈ ಆತ್ಮೀಕ ವಸ್ತ್ರಗಳು ಮೈಲಿಗೆಯಾಗುತ್ತದೆ. "ಅವರನ್ನು ಬೆಂಕಿಯ ಬಾಯೊಳಗಿಂದ ಎಳಕೊಂಡು ರಕ್ಷಿಸಿರಿ. ಕೆಲವರನ್ನು ಭಯಯುಕ್ತರಾಗಿ ಕರುಣಿಸಿರಿ. ಹೊಲಸು ನಡತೆಯಿಂದ ಮೈಲಿಗೆಯಾದ ಅವರ ಅಂಗಿಯನ್ನು ಅಸಹ್ಯಿಸಿರಿ" (ಯೂದ. 1:23). ಸಾರ್ದಿಸ್ ಸಭೆಯಲ್ಲಿ ತಮ್ಮ ವಸ್ತ್ರಗಳನ್ನು ಮೈಲಿಗೆಯಾಗದಂತೆ ಕಾಪಾಡಿಕೊಂಡ ಕೆಲವರು ಇದ್ದಂತೆ ನಾವಿರುವ ಸಭೆಯಲ್ಲಿ ಯಾರು ಹೇಗೆ ಬೇಕಾದರೂ ಜೀವಿಸಲಿ ಅವರನ್ನು ನೋಡದೆ ನಾವು ಪರಿಶುದ್ಧವಾಗಿ ಜೀವಿಸೋಣ. "ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವುದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರ ಚಿತ್ತದಿಂದ ಓಡೋಣ" (ಇಬ್ರಿ. 12:1–2). ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನರೂಢನಾಗಿದ್ದಾನೆ.

ಕರ್ತನಾದ ಯೇಸುಕ್ರಿಸ್ತನು ನಮಗೆ ಉತ್ತಮ ಮಾದರಿಯಾಗಿದ್ದಾನೆ. ನಾವು ಆತನನ್ನು ಮಾತ್ರ ದೃಷ್ಟಿಸಿ ನಮ್ಮ ಆತ್ಮೀಕ ಓಟವನ್ನು ಓಡೋಣ.

"ಅವರಲ್ಲಿ ಒಬ್ಬೊಬ್ಬನಿಗೆ ಒಂದೊಂದು ಬಿಳಿ ನಿಲುವಂಗಿಯು

ನೀನು ನನ್ನ ದೇವರು; ನಿನ್ನನ್ನು ಕೊಂಡಾಡುತ್ತೇನೆ; ನನ್ನ ದೇವರೇ,
ನಿನ್ನನ್ನು ಘನಪಡಿಸುತ್ತೇನೆ (ಕೀರ್ತ. 118:28).

ಕೊಡಲ್ಪಟ್ಟಿತು" (ಪ್ರಕ. 6:11).

2) **ಶುಭ್ರವಸ್ತ್ರ** :– ಪ್ರಕ. 3:4 ಅವರು ಯೋಗ್ಯರಾಗಿರುವುದರಿಂದ ಶುಭ್ರವಸ್ತ್ರಗಳನ್ನು ಧರಿಸಿಕೊಂಡು ನನ್ನ ಜೊತೆಯಲ್ಲಿ ನಡೆಯುವರು. ಕೆಲವೊಂದು ರಾಜರ, ಉನ್ನತ ವ್ಯಕ್ತಿಗಳ ಜೊತೆಯಲ್ಲಿ ಯಾರಾದರೂ ನಡೆಯುವುದಾದರೆ ಅವರು ಕೂಡ ಒಂದು ಸೂಟನ್ನು ಅಥವಾ ಉನ್ನತ ದರ್ಜೆಯ ವಸ್ತ್ರವನ್ನು ಧರಿಸುತ್ತಾರೆ. ಅದೇ ರೀತಿ ಕರ್ತನಾದ ಯೇಸುಕ್ರಿಸ್ತನೊಂದಿಗೆ ನಡೆಯುವಂತಹ ಯೋಗ್ಯತೆ ಶುಭ್ರವಸ್ತ್ರವಾಗಿದೆ. ನಾವು ನಮ್ಮ ಆತ್ಮೀಕ ವಸ್ತ್ರಗಳನ್ನು ಮಲೀನವಾಗದ ಹಾಗೆ ಕಾಪಾಡಿಕೊಳ್ಳಬೇಕು. ನಾವು ನಮ್ಮ ಲೌಕಿಕ ವಸ್ತ್ರಗಳನ್ನು ಹೇಗೆ ಪ್ರತಿದಿನ ಸೋಪಿನಿಂದ ತೊಳೆದು ಶುಭ್ರವಾಗಿಸುತ್ತೇವೋ ಹಾಗೆಯೇ ನಮ್ಮ ಆತ್ಮೀಕ ವಸ್ತ್ರಗಳನ್ನು ಕೂಡ ಶುದ್ಧವಾಗಿಡಬೇಕು.

**ಆತ್ಮೀಕ ವಸ್ತ್ರಗಳನ್ನು ಹೇಗೆ ಶುದ್ಧವಾಗಿಡುವುದು** :– I) ದೇವರ ವಾಕ್ಯದ ಮೂಲಕವಾಗಿ ಪ್ರತಿದಿನ ಶುದ್ಧೀಕರಣ ಹೊಂದಬೇಕು. "ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ" (ಯೋಹಾ. 15:1).

1) ದೇವರ ವಾಕ್ಯವನ್ನು ಅನುದಿನವೂ ಓದಿ ಧ್ಯಾನಿಸಬೇಕು (ಕೀರ್ತ. 1:1–3).
2) ದೇವರ ವಾಕ್ಯವನ್ನು ಕೇಳಬೇಕು (ರೋಮ. 10:17, ಅ.ಕೃ. 2:42).
3) ದೇವರ ವಾಕ್ಯವನ್ನು ಗಮನಿಸಬೇಕು (ಯಾಕೋ. 22:25, ಕೀರ್ತ. 119:105).
4) ದೇವರ ವಾಕ್ಯಕ್ಕೆ ಕಿವಿಗೊಡಬೇಕು (ಪ್ರಕ. 2:7–11,29, 3:6).
5) ದೇವರ ವಾಕ್ಯದ ಪ್ರಕಾರ ಜೀವಿಸಬೇಕು (ಪ್ರಕ. 1:3).
6) ದೇವರ ವಾಕ್ಯ ಒಪ್ಪಿಕೊಳ್ಳಬೇಕು (ಅ.ಕೃ. 2:41).
7) ದೇವರ ವಾಕ್ಯ ನಂಬಬೇಕು (ಅ.ಕೃ. 4:4, ಕೀರ್ತ. 119:63).
8) ದೇವರ ವಾಕ್ಯಕ್ಕೆ ಭಯಪಡಬೇಕು (ಯೆಶಾ. 66:2).
9) ದೇವರ ವಾಕ್ಯ ಅಭ್ಯಾಸ ಮಾಡಬೇಕು (ಎಜ್ರ. 7:10, ಅ,ಕೃ. 17:11).
10) ದೇವರ ವಾಕ್ಯಕ್ಕೆ ಪ್ರಾಮುಖ್ಯತೆ ಕೊಡಬೇಕು (2 ತಿಮೊ. 3:15).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಡಿಜಿಎಮ್ ಬೇತೇಲ್ ಅಂಕಣ

- **13ನೇ ಕೆರೀತ್ ಕೂಟವು ಜೂನ್ 20–2016ರಿಂದ 29ರವರೆಗೆ ಡಿಜಿಎಮ್ ಬೇತೇಲ್ ಚರ್ಚ್‌ನಲ್ಲಿ ನಡೆಸಲ್ಪಡುವದು.**
- **14ನೇ ಕೆರೀತ್ ಕೂಟವು ಆಗಸ್ಟ್ 8–2016ರಿಂದ 17ರವರೆಗೆ ಡಿಜಿಎಮ್ ಬೇತೇಲ್ ಚರ್ಚ್‌ನಲ್ಲಿ ನಡೆಸಲ್ಪಡುವದು.**
- **21 ದಿವಸದ ಉಪವಾಸ ಪ್ರಾರ್ಥನಾ ಕೂಟವು ಕರ್ತನ ಕೃಪೆಯಿಂದ ಒಳ್ಳೇ ರೀತಿಯಲ್ಲಿ ನಡೆಯಿತು.**

**ವಿಶೇಷ ಸೂಚನೆ**

ಜನವರಿ ತಿಂಗಳ ದೇವರ ಸ್ವರ ಮಾಸ ಪತ್ರಿಕೆಯು ಕಾರಣಾಂತರದಿಂದ ಮುದ್ರಿತವಾಗದ ನಿಮಿತ್ತ ನಿಮ್ಮ ಕೈಗೆ ತಲುಪಿಸಲು ಸಾಧ್ಯವಾಗಲಿಲ್ಲ ಅದಕ್ಕಾಗಿ ನಾವು ನಿಮ್ಮಲ್ಲಿ ವಿಷಾದಿಸುತ್ತೇವೆ.

ನಿನ್ನ ಸೇವಕನಾದ ನನ್ನ ಮೇಲೆ ದಯವಿಡು; ಆಗ ಜೀವದಿಂದಿದ್ದು
ನಿನ್ನ ವಾಕ್ಯವನ್ನು ಕೈಕೊಳ್ಳುವೆನು (ಕೀರ್ತ. 119:17).

# ಕರ್ತನು ನಿನ್ನೊಂದಿಗಿದ್ದಾನೆ (ಯೆಶಾ. 41:8–14).

**1) ದೇವರು ನಿನ್ನನ್ನು ಆರಿಸಿಕೊಂಡಿದ್ದಾನೆ** (ಯೆಶಾ. 41:8). ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು (ಎಫೆ. 1:4). ಕರ್ತನಿಗೆ ನಿನ್ನ ಕುರಿತು ಒಂದು ಉದ್ದೇಶವಿದೆ. ಆತನು ನಿನ್ನನ್ನು ಪ್ರೀತಿಸುತ್ತಾನೆ. ಆದ್ದಕಾರಣ ಆತನು ನಿನ್ನನ್ನು ಆರಿಸಿಕೊಂಡಿದ್ದಾನೆ.

**ಆತನು ಆರಿಸಿಕೊಂಡ ಉದ್ದೇಶವೇನು?**

1. ಫಲಕೊಡಲು (ಯೋಹಾ. 15:16).
2. ರಕ್ಷಣೆ ಹೊಂದಲು (2 ಥೆಸ. 2:13).
3. ಹೊಗಳಿಕೆಗೆ ಅಸ್ಪದ ಇರಬಾರದೆಂದು (1 ಕೊರಿ. 1:27:29).

**2) ದೇವರು ನಿನ್ನನ್ನು ಕರೆದಿದ್ದಾನೆ** (ಯೆಶಾ. 41:9). ದೇವರ ಕರೆ ಒಂದು ರಾಜಕೀಯ ಕರೆ ಅಲ್ಲ, ಒಬ್ಬ ಮನುಷ್ಯನ ಕರೆ ಅಲ್ಲ. ದೇವರ ಕರೆಗೆ ಒಂದು ಉದ್ದೇಶವಿದೆ.

1) ಪ್ರಭಾವದಲ್ಲಿ ಪಾಲಾಗಲು (1 ಥೆಸ. 2:12).
2) ಹೆಜ್ಜೆ ಜಾಡಿನಲ್ಲಿ ನಡೆಯಲು (1 ಪೇತ್ರ. 2:21).
3) ಮಗನ ಅನ್ಯೋನ್ಯತೆಗೆ (1 ಕೊರಿ. 1:9).
4) ನಿರೀಕ್ಷೆಗೆ (ಎಫೆ. 4:5).
5) ನಿತ್ಯಜೀವಕ್ಕಾಗಿ (1 ತಿಮೊ. 6:12).
6) ಪರಲೋಕ ಸ್ವಸ್ಥ್ಯಕ್ಕಾಗಿ (ಇಬ್ರಿ. 3:1).
7) ಸ್ವಾತಂತ್ರನಾಗಿ ಜೀವಿಸಲು (ಗಲಾ. 5:13).

**3) ದೇವರು ನಮ್ಮನ್ನು ತಳ್ಳಲಿಲ್ಲ** (ಯೆಶಾ. 41:9). ಈ ಲೋಕದಲ್ಲಿ ನಮ್ಮನ್ನು ತಂದೆ, ತಾಯಿ, ಸಹೋದರ, ಸಹೋದರಿಯರು, ಸ್ನೇಹಿತರು ತಳ್ಳಬಹುದು, ಕರ್ತನಾದ ಯೇಸುಕ್ರಿಸ್ತನು ಯಾವುದೇ ಪರಿಸ್ಥಿತಿಯಲ್ಲಿಯೂ ನಮ್ಮನ್ನು ತಳ್ಳದೇ ಸ್ವೀಕರಿಸುವನು. ಆತನ ಕಡೆಗೆ ದೃಷ್ಟಿಸಿ ಓಡಿ ಬಾ ಆತನು ನಿನ್ನನ್ನು ಪ್ರೀತಿಸುತ್ತಾನೆ.

**4) ನೀನಂತು ಹೆದರಬೇಡ ನಾನೇ ನಿನ್ನೊಂದಿಗಿದ್ದೇನೆ** (ಯೆಶಾ. 41:10). ಇದನ್ನು ಓದುತ್ತಿರುವಂತಹ ಅನೇಕರಲ್ಲಿ ಅನೇಕ ಭಯಗಳು ಇರಬಹುದು. ರೋಗದ ಭಯ, ಸಾಲದ ಭಯ, ಶತ್ರುಗಳ ಭಯ, ಭವಿಷ್ಯದ ಭಯ, ಮರಣದ ಭಯ. ಕರ್ತನು ಹೇಳುತ್ತಿದ್ದಾನೆ ನೀನು ಹೆದರಬೇಡ, ನಾನು ನಿನ್ನೊಂದಿಗಿದ್ದೇನೆ.

**5) ದಿಗ್ಭ್ರಮೆಗೊಳ್ಳದಿರು ನಾನೇ ನಿನ್ನ ದೇವರು** (ಯೆಶಾ. 41:10) ಸಮಸ್ಯೆಗಳನ್ನು ನೋಡಿ ದಿಗ್ಭ್ರಮೆಗೊಳ್ಳಬೇಡ, ಪ್ರೀತಿಸುವವರು ಬದಲಾಗುತ್ತಿರುವುದನ್ನು ನೋಡಿ ದಿಗ್ಭ್ರಮೆಗೊಳ್ಳಬೇಡ, ಸ್ನೇಹಿತರೆ ದ್ರೋಹಿಗಳಾಗುವುದನ್ನು ನೋಡಿ ದಿಗ್ಭ್ರಮೆಗೊಳ್ಳಬೇಡ ನಾನೇ ನಿನ್ನ ದೇವರಾಗಿದ್ದೇನೆ ಎಂದು ಕರ್ತನು ಅನ್ನುತ್ತಾನೆ. ಆತನು ನಿಮ್ಮ ಪರಿಸ್ಥಿತಿಗಳನ್ನು ಬದಲಾಯಿಸಬಲ್ಲನು.

**6) ನಾನು ನಿನ್ನನ್ನು ಬಲಪಡಿಸುತ್ತೇನೆ** (ಯೆಶಾ. 41:10):– ರೋಗದಿಂದ ಬಲಹೀನವಾಗಿದ್ದೀಯೋ, ಸತತವಾದ ಹೋರಾಟಗಳಿಂದ ಕುಗ್ಗಿ ಹೋಗಿದ್ದೀಯೋ, ಕೆಲವೊಂದು ಪರಿಸ್ಥಿತಿಗಳು ನಿನ್ನನ್ನು ಬಲಹೀನನನ್ನಾಗಿ ಮಾಡಿದಿಯೋ ಭಯಪಡಬೇಡ. ಬಲಹೀನನಾದ ಸಂಸೋನನ್ನು ಬಲಪಡಿಸಿದಾತನು, ಬಲಹೀನನಾದ ದಾವೀದನನ್ನು ಬಲಪಡಿಸಿದಾತನು, ಬಲಹೀನನಾದ ಗಿದ್ಯೋನನ್ನು ಬಲಪಡಿಸಿದಾತನು ನಿನ್ನೊಂದಿಗೆ ಇದ್ದು ನಿನ್ನನ್ನು ಬಲಪಡಿಸುತ್ತಾನೆ.

**7) ಹೌದು ನಿನಗೆ ಸಹಾಯ ಕೊಡುತ್ತೇನೆ** (ಯೆಶಾ. 41:10). ನಿನ್ನ ಜೀವಿತದ ಒಳ್ಳೇಯ ಸಮಯದಲ್ಲಿ ಸಹಾಯ ಮಾಡುತ್ತೇನೆ ಎಂದ ವ್ಯಕ್ತಿಗಳೇ ನಿನ್ನನ್ನು ಬಿಟ್ಟು ಹೋಗಿರಬಹುದು ಕರ್ತನು ನಿನಗೆ ಸಹಾಯ ಮಾಡುವನು. ಆತನ ಮೇಲೆ ನಂಬಿಕೆಯಿಡು, ಆತನು ನಿನ್ನನ್ನು ಕೈಬಿಡುವುದಿಲ್ಲ (ಕೀರ್ತ. 121:1–2).

**8) ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರ ಮಾಡಿ ಕೊಡುತ್ತೇನೆ** (ಯೆಶಾ. 41:10):– ಆತನ ಕೈ ಅದು ಧರ್ಮದ ಕೈಯಾಗಿದೆ. ನಿನಗೆ ಆಧಾರವಾಗಿ ಆತನು ಕೊಡುತ್ತಾನೆ. ಆತನ ಕರವು ರೂಪಿಸುವ ಕರ, ಆತನ ಕರ ಮಾರ್ಪಡಿಸುವ ಕರ, ಆತನ ಕರ ಆಶೀರ್ವದಿಸುವ ಕರವಾಗಿದೆ, ಆತನ ಕರ ಬಿಡಿಸುವ ಕರವಾಗಿದೆ.

**9) ನಿನ್ನ ಮೇಲೆ ಕಿಡಿಕಾರಿದವರು ಆಶಾಭಂಗಪಟ್ಟು ಅವಮಾನ ಹೊಂದುವರು** (ಯೆಶಾ. 41:11). ಕೀರ್ತ. 23:9 ರಲ್ಲಿ

ನನ್ನ ಆತ್ಮವು ನಿನ್ನನ್ನು ಅಂಟಿಕೊಂಡು ಹಿಂಬಾಲಿಸಿರುವದು;
ನಿನ್ನ ಬಲಗೈ ನನಗೆ ಆಧಾರವಾಗಿರುವದು (ಕೀರ್ತ. 63:8).

ದಾವೀದನು ವೈರಿಗಳ ಮುಂದೆ ನಿನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೇನೆಂದು ಹೇಳುತ್ತಾನೆ. ನನ್ನ ಸೇವೆಯ ಆರಂಭದಿಂದ ಇಲ್ಲಿಯವರೆಗೆ ಕಿಡಿಕಾರಿದವರ, ತೊಂದರೆ ಕೊಟ್ಟವರ ಮಧ್ಯದಲ್ಲಿ ದೇವರು ನನ್ನನ್ನು ಆಶೀರ್ವಾದವಾಗಿ ನಡೆಸುತ್ತಿದ್ದಾನೆ. ಅದೇ ಕರ್ತನು ನಿನ್ನ ಜೀವಿತದಲ್ಲಿಯೂ ಮಾಡುವನು.

10) **ನಿನ್ನ ಸಂಗಡ ವ್ಯಾಜ್ಯ ಮಾಡಿದವರು ನಾಶವಾಗಿ ಇಲ್ಲದೆ ಹೋಗುವರು** (ಯೆಶಾ. 41:12). ಮೊರ್ದೆಕೈಗೆ ವಿರುದ್ಧವಾಗಿ ನಿಂತ ಹಾಮಾನನು ನಾಶವಾಗಿ ಇಲ್ಲದೆ ಹೋದನು. ದಾನಿಯೇಲನಿಗೆ ವಿರುದ್ಧವಾಗಿ ನಿಂತ ಅಧಿಕಾರಿಗಳು ಕುಟುಂಬ ಸಮೇತ ನಾಶವಾಗಿ ಹೋದರು. ಇಂದು ನಿನಗೆ ವಿರುದ್ಧವಾಗಿರುವ ವ್ಯಕ್ತಿಗಳ ಕುರಿತು ಭಯಪಡಬೇಡ ದೇವರು ನಿನ್ನೊಂದಿಗಿದ್ದಾನೆ.

11) **ನಾನೇ ನಿನ್ನ ಕೈ ಹಿಡಿಯುತ್ತೇನೆ** (ಯೆಶಾ. 41:13) :– ಕರ್ತನು ನಿನ್ನ ಕೈ ಹಿಡಿದರೆ ಕೊನೆಯವರೆಗೂ ಕೈ ಬಿಡುವುದಿಲ್ಲ, ನಿನ್ನ ಕರವನ್ನು ಆತನ ಕರದಲ್ಲಿ ಇಡು ನೀನು ಸುರಕ್ಷಿತನಾಗಿರುವಿ.

12) **ಕರ್ತನು ನಿನ್ನ ವಿಮೋಚಕನು** (ಯೆಶಾ. 41:14) :– ಇಂದು ಯಾವುದೇ ಬಂಧನದಲ್ಲಿದ್ದರೂ ಕರ್ತನು ನಿನ್ನನ್ನು ವಿಮೋಚಿಸುವನು ನಿನ್ನ ವಿಮೋಚಕನು ಜೀವ ಸ್ವರೂಪನೆಂದು ಬಲ್ಲೆನು (ಯೋಬ. 19:25). ಮರಣಕರವಾದ ರೋಗವೂ, ಕೋರ್ಟು ಕೇಸಾಗಿದೆಯೋ, ದುಶ್ಚಟವೋ ಕರ್ತನು ನಿನ್ನನ್ನು ವಿಮೋಚಿಸುವನು.

**ಪಾ॥ ಸುನಿಲ್ ಜಾನ್ ಡಿ'ಸೋಜಾ.**

## ಪ್ರಾರ್ಥನಾ ಮನವಿಗಳು

- **ಹೊಸ ವರ್ಷದಲ್ಲಿ ನಮ್ಮ ದೇಶದಲ್ಲಿ, ರಾಜ್ಯದಲ್ಲಿ, ತಾಲ್ಲೂಕಿನಲ್ಲಿ, ಪಟ್ಟಣದಲ್ಲಿ, ಗ್ರಾಮದಲ್ಲಿ ಯಾವುದೇ ಭಂಗನಾಶನ ಸುದ್ಧಿಗಳು, ಬಲಾತ್ಕಾರದ ಸುದ್ಧಿಗಳು ಕಿವಿಗೆ ಬೀಳದ ಹಾಗೆ ದೇಶದಲ್ಲಿ ಸಮಾಧಾನ, ಆರೋಗ್ಯ, ಸುಕ್ಷೇಮ, ಸಮೃದಿ ಉಂಟಾಗುವಂತೆ ಪ್ರಾರ್ಥಿಸಿರಿ.**
- **ವಾತಾವರಣವನ್ನು ಕರ್ತನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ನಡೆಸುವಂತೆ ಪ್ರಾರ್ಥಿಸಿರಿ.**
- **ನಮ್ಮ ದೇಶದಲ್ಲಿ ಯಾವುದೇ ಬಡತನ, ಬರಗಾಲ, ವಿದ್ಯುತ್ತ್‌ಛಕ್ತಿಯ ಅಭಾವ, ನೀರಿನ ಸಮಸ್ಯೆ, ಅಂಟುರೋಗಗಳು ಉಂಟಾಗದಂತೆ ಪ್ರಾರ್ಥಿಸಿರಿ.**
- **ಪ್ರವಾಹ ಪೀಡಿತ ಪ್ರದೇಶದ ಜನರ ರಕ್ಷಣೆಗಾಗಿ ಪ್ರಾರ್ಥಿಸಿರಿ.**
- **ಪ್ರತಿಯೊಂದು ದೇವರ ಸೇವಕರುಗಳು, ಸಭೆಯ ವಿಶ್ವಾಸಿಗಳು ಸಾಕ್ಷಿಯುಳ್ಳ, ಪರಿಶುದ್ಧವಾದ, ಜೀವಿತವನ್ನು ನಡೆಸುವಂತೆ, ರಕ್ಷಣೆಯಲ್ಲಿ, ನಂಬಿಕೆಯಲ್ಲಿ ದೃಢವಾಗಿ ನಿಲ್ಲಲು ಪ್ರಾರ್ಥಿಸಿರಿ.**
- **ನಮ್ಮ ಭಾರತ ದೇಶದಲ್ಲಿ ನಡೆಯುತ್ತಿರುವ ಎಲ್ಲಾ ಆತ್ಯಾಚಾರಗಳು ನಿಂತುಹೋಗುವುದಕ್ಕಾಗಿ, ಪ್ರತಿಯೊಂದು ಮಕ್ಕಳಿಗೆ, ಮಹಿಳೆಯರಿಗೆ ಕರ್ತನು ಸಂರಕ್ಷಣೆಯನ್ನು ಕೊಡುವಂತೆ.**

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ಜನರೇ, ಯಾವಾಗಲೂ ಆತನನ್ನೇ ನಂಬಿ ನಿಮ್ಮ ಹೃದಯವನ್ನು ಆತನ ಮುಂದೆ ಬಿಚ್ಚಿರಿ;
ದೇವರು ನಮ್ಮ ಆಶ್ರಯವು (ಕೀರ್ತ. 62:8).




**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಆಂಗ್ಲಮಾಧ್ಯಮ ಸ್ಕೂಲ್‌ನ ನೊಂದಾವಣೆಯು ಮಾರ್ಚ್ ತಿಂಗಳಿನ 2ನೇ ವಾರದಿಂದ ಪ್ರಾರಂಭವಾಗಲಿದೆ. ಎಲ್‌ಕೆಜಿ, ಯುಕೆಜಿ ಮಕ್ಕಳ ಹೆಸರನ್ನು ನೊಂದಾಯಿಸುವವರು ಈ ಕೆಳಗಿನ ಶಾಲೆಯ ಕಛೇರಿಗೆ ಬಂದು ಹೆಸರನ್ನು ನೊಂದಾಯಿಸಿರಿ.**

ಕಛೇರಿಯ ವಿಳಾಸ :
**ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್ ಸ್ಕೂಲ್,**
ಯೇಸುಪುರ, ಶಂಕರಪುರ ಪೋಸ್ಟ್, ಇನ್ನಂಜೆ ಗ್ರಾಮ, ಉಡುಪಿ–574115.

# ಪೂರ್ವ ಸ್ಥಿತಿ ಹೋಯಿತು

ಒಂದು ಹಡಗು ಒಡೆದುಹೋಯಿತು. ನೀರಿನಲ್ಲಿ ಬಿದ್ದ ಪ್ರಯಾಣಿಕರು ಪರಿತಪಿಸುತ್ತಿದ್ದರು. ಅನೇಕರು ಮುಳುಗಿ ಸತ್ತುಹೋದರು. ಒಬ್ಬನು ಮಾತ್ರ ತಪ್ಪಿಸಿಕೊಂಡು ದೂರದಲ್ಲಿದ್ದ ದ್ವೀಪದೆಡೆಗೆ ಬಹಳ ಪ್ರಯಾಸದಿಂದ ಮುಳುಗುತ್ತಾ ತೇಲುತ್ತಾ ಬರುತ್ತಿದ್ದನು. ಆ ದ್ವೀಪದ ಜನರು ಅವನನ್ನು ನೋಡಿ, ತಮ್ಮ ಹಡಗುಗಳನ್ನು ತೆಗೆದುಕೊಂಡು ಬಂದು ಅವನನ್ನು ಕಾಪಾಡಿ, ಅವನಿಗೆ ಆಹಾರ ಕೊಟ್ಟು ಉಪಚರಿಸಿದರು. ಮೂರನೇ ದಿನ ಆ ದ್ವೀಪವನ್ನು ಸುತ್ತಾಡಿ ಬಂದ ಅವನು ಆ ದ್ವೀಪವಾಸಿಗಳ ಬಳಿ, ನೀವೆಲ್ಲರೂ ಬಹಳ ಒಳ್ಳೆಯವರಾಗಿ ಕಾಣುತ್ತೀರಿ? ಆದರೆ ನಿಮ್ಮನ್ನು ಈ ಮತ ಕೆಡಿಸಿಬಿಡುತ್ತದೆ, ಸೋಮಾರಿಗಳನ್ನಾಗಿಸುತ್ತದೆ. ಅದು ಒಂದು ಮಾದಕ ವಸ್ತು ಎಂದು ನೀವು ಯಾಕೆ ತಿಳಿಯಲಿಲ್ಲ. ಯೇಸುಕ್ರಿಸ್ತನನ್ನು ಆರಾಧಿಸಿ ಮೂಢನಂಬಿಕೆಯಲ್ಲಿ ಯಾಕೆ ಬೀಳುತ್ತೀರಿ? ಎಂದನು. ಅದಕ್ಕೆ ಅವರು ಅಯ್ಯಾ ನಾವು ನರಮಾಂಸ ಭಕ್ಷಕರಾಗಿದ್ದೆವು. ಹತ್ತು ವರ್ಷಕ್ಕೆ ಹಿಂದೆ ನೀವು ಇಲ್ಲಿಬಂದಿದ್ದದ್ದರೆ ನೀವೇ ನಮಗೆ ಆಹಾರವಾಗುತ್ತಿದ್ದಿರಿ. ಒಬ್ಬ ಮಿಶನರಿ ತನ್ನ ಪ್ರಾಣದ ಆಸೆ ತೊರೆದು ನಮ್ಮಲ್ಲಿಗೆ ಬಂದು ಯೇಸುಕ್ರಿಸ್ತನ ಕುರಿತು ನಮಗೆ ಹೇಳಿದರು. ಕೊಲೆಗಡುಕತನವೆಲ್ಲವನ್ನೂ ಅಗಲಿಸಿ, ನಮ್ಮನ್ನು ಒಳ್ಳೆಯವರನ್ನಾಗಿ ಸಾಧುಗಳನ್ನಾಗಿರಿಸುವನು. ಇಲ್ಲದಿದ್ದರೆ ನೀವು ಹೀಗೆ ನಮ್ಮ ಬಳಿ ಮಾತಾಡಲಾಗುತ್ತಿರಲಿಲ್ಲವೆಂದರು. ಇದನ್ನು ಕೇಳಿದ ಪ್ರಯಾಣಿಸಿದ ಪ್ರಯಾಣಿಕ ಆಶ್ಚರ್ಯಪಟ್ಟನು. ಕಟ್ಟಳೆ, ಕಾನೂನು, ಸಮಾಜ, ಸೆರೆಮನೆಗಳು ಮಾರ್ಪಡಿಸಲಾರದವರನ್ನು ಕರ್ತನು ಒಂದು ಕ್ಷಣದಲ್ಲಿ ಮಾರ್ಪಡಿಸುವನು.

"ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2 ಕೊರಿ. 5:17).

ಸಂಗ್ರಹ.

ಯೆರೂಸಲೇಮೆಂಬ ಪರಿಶುದ್ಧ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದು ಬರುವದನ್ನು ನನಗೆ ತೋರಿಸಿದನು (ಪ್ರಕ. 21:10).

# ಕ್ರಿಸ್ತನಲ್ಲಿರುವ ಜೀವಿತ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

"ನೀವು ಕರ್ತನಲ್ಲಿ ದೃಢವಾಗಿ ನಿಂತಿದ್ದರೆ ನಿಮಗೆ ಜೀವಕಳೆ" (1 ಥೆಸ. 3:8).

ಈ ಲೋಕದಲ್ಲಿ 2 ರೀತಿಯ ಕ್ರೈಸ್ತರಿರುವರು. ಮೊದಲನೆಯದಾಗಿ ಕ್ರಿಸ್ತನಲ್ಲಿರುವ ಕ್ರೈಸ್ತರು. ಎರಡನೆಯದಾಗಿ ಬರೀ ಹೆಸರಿಗೆ ಮಾತ್ರ ಕ್ರೈಸ್ತರೆನಿಸಿಕೊಳ್ಳುವ ಕ್ರೈಸ್ತರು. ಕ್ರಿಸ್ತನಲ್ಲಿರುವ ಕ್ರೈಸ್ತರು ನಿತ್ಯಜೀವಕ್ಕೆ ಪಾತ್ರರಾಗುವರು. ಕ್ರಿಸ್ತನಲ್ಲಿರುವ ಕ್ರೈಸ್ತರಿಗೆ ಅಪರಾಧ ನಿರ್ಣಯವು ಇಲ್ಲವೇ ಇಲ್ಲ (ರೋಮ. 8:1–2). ಕ್ರಿಸ್ತನ ಹೊರಗಿರುವ ಕ್ರೈಸ್ತರು ಬರೀ ಲೌಕಿಕವನ್ನು ಮಾತ್ರ ಬಯಸುವರು. ಇಂದು ನಾವು ನಿಜವಾಗಿಯೂ ಕ್ರಿಸ್ತನಲ್ಲಿದ್ದೇವೋ, ಇಲ್ಲವೋ? ಎಂದು ಪರೀಕ್ಷಿಸಬೇಕಾಗಿದೆ. 'ಕ್ರಿಸ್ತ ನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ. ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು ಯೇಸುಕ್ರಿಸ್ತನು ನಿಮ್ಮಲ್ಲಿದ್ದಾನೆಂಬುದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವುದಿಲ್ಲವೋ? (2 ಕೊರಿ. 13:5). ಕ್ರಿಸ್ತನಲ್ಲಿರುವವನು ತಾನು ಕ್ರಿಸ್ತನಲ್ಲಿದ್ದೇನೆ ಎಂಬುವುದನ್ನು ತಿಳಿದುಕೊಳ್ಳುವುದು ಹೇಗೆ ಎಂಬುವುದನ್ನು ಈ ಕೆಳಗಿನಂತೆ ಧ್ಯಾನಿಸೋಣ.

ವಯಸ್ಕರ ಸ್ವರ

**1) ಒಬ್ಬನು ಕ್ರಿಸ್ತನಲ್ಲಿದ್ದರೆ ನೂತನ ಸೃಷ್ಟಿಯಾಗಿರುವನು** (2 ಕೊರಿ. 5:17):– ಪ್ರಿಯರೇ, ಕ್ರಿಸ್ತನಲ್ಲಿರುವುದು ಎಂದರೇನು ಎಂಬುವುದನ್ನು ತಿಳಿದುಕೊಳ್ಳೋಣ. ಕ್ರಿಸ್ತನಲ್ಲಿರುವುದು ಅಂದರೆ ಯೇಸುವನ್ನು ನಂಬುವುದು. ಎರಡನೆಯದಾಗಿ ಆತನಿಗೆ ವಿಧೇಯರಾಗಿ ಜೀವಿಸುವುದು. ಮೂರನೆಯದಾಗಿ ಆತನನ್ನು ಎಲ್ಲಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವದು, ನಾಲ್ಕನೆಯದಾಗಿ ಆತನವರೆಂದು ಚೆನ್ನಾಗಿ ಅರಿತುಕೊಳ್ಳುವುದು, ಐದನೆಯದಾಗಿ ಆತನನ್ನೇ ಆತುಕೊಂಡು ಜೀವಿಸುವುದು ಇತ್ಯಾದಿ ಇತ್ಯಾದಿ. ಕ್ರಿಸ್ತನಲ್ಲಿದ್ದರೆ ಒಬ್ಬನು ನೂತನ ಸೃಷ್ಟಿಯಾಗುವನು. ಅವನ ಹಳೆಯ ಪಾಪದ, ದೇವರ ಚಿತ್ತವಿಲ್ಲದ ಜೀವಿತ ಎಲ್ಲಾ ಹೋಗಿ ಹೊಸ ಜೀವಿತ ಜೀವಿಸುವನು. ಹೊಸದಾಗಿ ಹುಟ್ಟದಿದರೆ ಅವನು ದೇವರ ರಾಜ್ಯವನ್ನು ಕಾಣಲಾರನು (ಯೋಹಾ. 3:3). ಕೆಲವು ಕ್ರೈಸ್ತರು ಬರೀ ಭಾನುವಾರ ಮಾತ್ರ ಸ್ವಲ್ಪ ಮಟ್ಟಿಗೆ ಕ್ರೈಸ್ತರಾಗಿ ಜೀವಿಸುವುದಕ್ಕಾಗಿ ಪ್ರಯತ್ನ ಪಡುತ್ತಾರೆ. ಉಳಿದ ದಿನಗಳಲ್ಲಿ ಅದೇ ಪಾಪದ, ಲೋಕದ ಜೀವಿತವನ್ನು ಜೀವಿಸುತ್ತಾರೆ. ಹಳೇ ಸ್ವಭಾವ ಹೋಗಿ ನೂತನ ಸ್ವಭಾವ ಧರಿಸಿಕೊಂಡವನೇ ನಿಜವಾಗಿಯೂ ಕ್ರಿಸ್ತನಲ್ಲಿರುತ್ತಾನೆ. ಹಳೇ ಗೋಡೆಯಲ್ಲಿ ದಪ್ಪ ಅಕ್ಷರಗಳಲ್ಲಿ ಬರೆದು ಹಾಕಿ ಅನಂತರ ಅದನ್ನು ಬೇಡವೆಂದು ಅಳಿಸಲು ಸುಣ್ಣ ಬಳಿದ ಗೋಡೆಯಂತೆ ಇರುತ್ತಾರೆ. ಸ್ವಲ್ಪ ದಿವಸಗಳಲ್ಲಿ ಮೇಲೆ ಬಳಿದಿದ್ದ ಸುಣ್ಣ ಹೋಗಲು ಅದೇ ಹಳೇ ಅಕ್ಷರಗಳು ದಪ್ಪವಾಗಿ ಕಾಣಿಸಲ್ಪಡುವುದು. ಕೆಲವರು ಇದೇ ರೀತಿ ಆರಂಭದಲ್ಲಿ ಸ್ವಲ್ಪ ದಿನ ಕ್ರೈಸ್ತರೆಂದು ಹಾಡು, ಪಾಡು, ಡ್ಯಾನ್ಸ್ ಇತ್ಯಾದಿ, ಸ್ವಲ್ಪ ದಿನಗಳ ನಂತರ ಅದೇ ಹಳೇ ಜೀವಿತ. ಕಾರಣ ಹಳೇ ಸ್ವಭಾವ ಇನ್ನು ಬಿಟ್ಟು ಕೊಡದೆ ಮೇಲ್ಮಟ್ಟಕ್ಕೆ ಮಾತ್ರ ಲೇಪನ ಅಷ್ಟೇ. ನಾವು ಪಾಪದಲ್ಲಿ ಇರದಂತೆ ನಮ್ಮ ಪಾಪಾಧೀನ ಸ್ವಭಾವು ಶಿಲುಬೆಗೆ ಹಾಕಲ್ಪಡಬೇಕು (ರೋಮ. 6:6). ನಾವು ಹೊಸ ಸೃಷ್ಟಿಯಾಗಿ ಕ್ರಿಸ್ತನಲ್ಲಿರುವುದಾದರೆ ಮಾತ್ರ ಪವಿತ್ರಾತ್ಮನು ನಮ್ಮನ್ನು ನಡೆಸುವವನಾಗಿರುತ್ತಾನೆ. "ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವುದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ" (ರೋಮ. 8:9). 'ಕ್ರಿಸ್ತನ ಆತ್ಮನು ನಮ್ಮಲ್ಲಿರುವುದಾದರೆ ಮಾತ್ರ ಕ್ರಿಸ್ತನವರು. ಇಲ್ಲದಿದ್ದರೆ ನಾವು ಕ್ರಿಸ್ತನವರಲ್ಲ' (ರೋಮ. 9:10). ಕೆಲವರು ಕ್ರಿಸ್ತನಲ್ಲಿದ್ದೇನೆ ಎಂದು ಹೇಳಿ ಅದೇ ಹಳೇ ದ್ವೇಷ, ಸುಳ್ಳು, ಕಳ್ಳತನ, ಕುಡುಕುತನ, ಮೋಸ ಇತ್ಯಾದಿ ಒಳಗೆ ಇಟ್ಟು ಹೊಸ ಸೃಷ್ಟಿ ಎಂದು ಹೇಳುತ್ತಾರೆ. ಖಂಡಿತ ಇವರು ಹಳೇ ಸ್ವಭಾವವನ್ನು ಇನ್ನು ಬಿಡದ ಕಾರಣ ಹೊಸ ಸೃಷ್ಟಿಯಾಗಲು ಅಸಾಧ್ಯ. ಇಂತಹವರು ಕ್ರಿಸ್ತನ ಹೊರಗಿರುವವರು ಅಷ್ಟೇ.

**2) ಕ್ರಿಸ್ತನಲ್ಲಿದ್ದರೆ ಸಮಾಧಾನದ ಜೀವಿತ ನಮ್ಮದಾಗುವುದು** (ಯೋಹಾ. 16:33) ನೀವು ನನ್ನಲ್ಲಿದ್ದು ಮನಶ್ಶಾಂತಿ ಹೊಂದಿದವರಾಗಿರಬೇಕು. ಯೇಸು ಹೇಳಿದ ಮಾತನ್ನು ಧ್ಯಾನಿಸಿರಿ. ನಮಗೆ ಲೋಕದಲ್ಲಿ ಕಷ್ಟ ಸಂಕಟಗಳು ಇದ್ದರೆ ಯೇಸುವಿನಲ್ಲಿ ಶಾಂತಿ ಸಮಾಧಾನಗಳಿರುತ್ತದೆ. ಈ ಲೋಕದಲ್ಲಿನ ಅಲ್ಪ ಕಷ್ಟ ಸಂಕಟಗಳು ಕ್ರಿಸ್ತನಲ್ಲಿ ಇದ್ದವನ ಸಮಾಧಾನವನ್ನು ನಾಶಮಾಡಲಾರವು. ನಮ್ಮಲ್ಲಿ ಕ್ರಿಸ್ತನ ಸಮಾಧಾನ ಯಜಮಾನ ಆಗಿರುವಾಗ ನಮಗೆ ಎದುರಾಗಿ ಬರುವ ಚಿಂತೆ, ಭಯ, ಭಾದೆ, ಕಷ್ಟ ಇವೆಲ್ಲವುಗಳು

ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವದು (ರೋಮಾ. 8:19).

ಸಮಾಧಾನದ ಅಡಿಯಾಳಗಿರುವವು (ಕೊಲೊ. 3:15). ಒಂದು ಸಲ ಸಮುದ್ರದಲ್ಲಿ ಭಾರೀ ಪ್ರಮಾಣದಲ್ಲಿ ಗಾಳಿ ತುಫಾನು ಎದ್ದು ಅನೇಕ ಹಡಗುಗಳು ಮುಳುಗಿ ನಷ್ಟವಾದವಂತೆ. ಆದರೆ ಒಂದು ಹಡಗು ರಾತ್ರಿ ಇಡೀ ಪ್ರಯಾಣ ಮಾಡಿ ದಡ ಸೇರಿದಾಗ ಜನರೆಲ್ಲಾ ಅದರೊಳಗಿಂದ ಇಳಿಯುವಾಗ ಬಹಳಷ್ಟು ಜನರು ಅವರ ಯೋಗ್ಯ ಕ್ಷೇಮವನ್ನು ವಿಚಾರಿಸಲು ಮುಂದಾದರು. ಎಷ್ಟೋ ಹಡಗುಗಳು ಮುಳುಗಿ ನಾಶವಾದಾಗ್ಯು ನಿಮ್ಮ ಹಡಗಿಗೆ ಯಾವ ಅಪಾಯವೂ ತಟ್ಟಲಿಲ್ಲವೋ? ಎಂದು ಪ್ರಶ್ನಿಸಿದಾಗ ಹಡಗಿನ ನಾವಿಕ ಹೀಗೆಂದನು, ನಮ್ಮದು ಜಲಾಂರ್ತಗಾಮಿ ಹಡಗು. ನೀರಿನ ಸಮುದ್ರದ ಒಳಭಾಗದಲ್ಲಿದ್ದ ನಮಗೆ ಇದ್ಯಾವುದು ಸಂಭವಿಸಲಿಲ್ಲ ಎಂದನು. ಪ್ರಿಯ ದೇವ ಮಗುವೆ ಅದೇ ಪ್ರಕಾರ ನಾವು ಕ್ರಿಸ್ತನೊಳಗೆ ಇದ್ದಾಗ ಬರುವಂತಹ ಕಷ್ಟ, ಹೋರಾಟ, ಸಂಕಟಗಳು ನಮ್ಮನ್ನು ಬಾಧಿಸಲಾರವು. ಬಹಳಷ್ಟು ಜನರು ಕ್ರಿಸ್ತನಲ್ಲಿದ್ದು ದೊಡ್ಡ ದೊಡ್ಡ ಶೋಧನೆಯನ್ನು ದಾಟಿ ಬರುತ್ತಾರೆ ಆದರೆ ಕೆಲವು ಜನರು ಚಿಕ್ಕ ಚಿಕ್ಕ ಹೋರಾಟ ಬಂದಾಗ ಬಿದ್ದು ಹೋಗುತ್ತಾರೆ, ಸಭೆಯನ್ನು, ಕ್ರಿಸ್ತನನ್ನು ಬಿಟ್ಟು ಹೋಗುವ ಕಾರಣ ಇವರು ಕ್ರಿಸ್ತನಲ್ಲಿ ಇರದ ಕಾರಣ ಈ ರೀತಿ ಸಂಭವಿಸುವುದು. ಸೈತಾನನು ದೇವ ಮಕ್ಕಳನ್ನು ಹೆದರಿಸಲು ಪ್ರಯತ್ನಿಸುತ್ತಾನೆ. ಕ್ರಿಸ್ತನಲ್ಲಿರುವುದಾದರೆ ಗೆಲ್ಲುವುದು ನೀವೇ. ಹಲ್ಲೆಲ್ಲೂಯ.

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

---

# ಸ್ಥಳೀಯ ಮತ್ತು ವಿದೇಶ ಸುದ್ಧಿ

- ಪಂಜಾಬ್ ಪಠಾಣ್‌ಕೋಟ್ ವಾಯುನೆಲೆ ಮೇಲಿನ ದಾಳಿಗೆ ಸಂಬಂಧಿಸಿದಂತೆ ಭಾರತ ಹಾಗೂ ಅಮೆರಿಕದ ಒತ್ತಡಕ್ಕೆ ಮಣಿದಿರುವ ಪಾಕಿಸ್ತಾನ, ಕೊನೆಗೂ ಭಾರತ ನೀಡಿದ್ದ ಮಾಹಿತಿ ಆಧರಿಸಿ ಉಗ್ರರ ವಿರುದ್ಧಕ್ರಮ ಜರುಗಿಸುವ ಪ್ರಕ್ರಿಯೆ ಆರಂಭಿಸಿದೆ.

- ಹೆಲ್ಮೆಟ್ ಕಡ್ಡಾಯ ಇಂದಿನಿಂದ ಜಾರಿ ಹಿಂಬದಿ ಸವಾರರೂ ಧರಿಸಬೇಕು. 12 ವರ್ಷ ಮೇಲ್ಪಟ್ಟ ಎಲ್ಲರೂ ಬೈಕ್‌ನಲ್ಲಿ ಹೆಲ್ಮೆಟ್ ಹಾಕಬೇಕು. ಉಲ್ಲಂಘಿಸಿದರೆ ಸದ್ಯಕ್ಕೆ ಎಚ್ಚರಿಕೆ, ಮಾಸಾಂತ್ಯದಿಂದ ದಂಡ? ದ್ವಿಚಕ್ರ ವಾಹನಗಳ ಹಿಂಬದಿ ಸವಾರರೂ ಹೆಲ್ಮೆಟ್ ಕಡ್ಡಾಯವಾಗಿ ಧರಿಸಬೇಕು ಎಂಬ ನಿಯಮ ರಾಜ್ಯಾದ್ಯಂತ ಜಾರಿಯಾಗಲಿದೆ. ಆದರೆ ನಿಯಮ ಪಾಲಿಸದ ಸವಾರರ ಮೇಲೆ ದಂಡ ಪ್ರಯೋಗ ಮಾತ್ರ ಮಾಸಾಂತ್ಯದಿಂದ ಆರಂಭವಾಗುವ ಸಾಧ್ಯತೆಯಿದೆ.

- ವಿಶ್ವವಿದ್ಯಾಲಯಗಳು ಸೇರಿದಂತೆ ಸರಕಾರಿ ಕಾಲೇಜುಗಳ ಉಪನ್ಯಾಸಕರು ಹಾಗೂ ಇತರೆ ಸಿಬ್ಬಂದಿ ನೇಮಕಾತಿಗಾಗಿ ಕೆಪಿಎಸ್‌ಸಿ ಮಾದರಿಯಲ್ಲೇ ಕೇಂದ್ರೀಕೃತ ನೇಮಕಾತಿ ವ್ಯವಸ್ಥೆ ಜಾರಿಗೊಳಿಸಲು ತೀರ್ಮಾನಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಟಿ.ಬಿ. ಜಯಚಂದ್ರ ತಿಳಿಸಿದ್ದಾರೆ.

- ಸರಕಾರಿ ನೌಕರರ ನಿವೃತ್ತಿ ಜೀವನ ಅತಂತ್ರವಾಗದಿರಲಿ ಎಂಬ ಸದುದ್ದೇಶದಿಂದ ಸ್ವಾತಂತ್ರ್ಯ ಪೂರ್ವದಿಂದಲೂ ನಮ್ಮ ದೇಶದಲ್ಲಿ ಪಿಂಚಣಿ ವ್ಯವಸ್ಥೆ ಜಾರಿಯಲ್ಲಿದೆ. ಅಲ್ಲದೆ ನೌಕರರು ಪಿಂಚಣಿ ಪಡೆಯುವುದು 'ಹಕ್ಕು' ಎಂದು ಉಚ್ಚನ್ಯಾಯಾಲಯ ತೀರ್ಪೊಂದರಲ್ಲಿ ಉಲ್ಲೇಖಿಸಿದೆ. ಆದರೆ ಕೇಂದ್ರ ಸರಕಾರ ನೌಕರರ ಪಿಂಚಣಿಯನ್ನು ಹೊರೆ ಎಂದು ಭಾವಿಸಿದಂತಿದೆ. ಅದು ಪಿಂಚಣಿ ನಿಧಿನಿಯಂತ್ರಣ ಹಾಗೂ ಅಭಿವೃದ್ಧಿ (ಪಿಎಫ್‌ಆರ್‌ಡಿಎ) ನೀತಿ'ಯ ನಿಯಮಾನುಸಾರ ನೂತನ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಜಾರಿಗೆ ತಂದಿದೆ.

- ಅಮೆರಿಕದ ಮಾಜಿ ಅಧ್ಯಕ್ಷ ಅಬ್ರಹಾಂ ಲಿಂಕನ್ ಅವರು ತಮ್ಮ ಹತ್ಯೆಗೂ ಒಂದು ವಾರದ ಮುನ್ನ 10 ವರ್ಷದ ಬಾಲಕನಿಗೆ ಬರೆದು ಸಹಿ ಹಾಕಿದ ಪತ್ರದ ಹಸ್ತಪ್ರತಿ 22 ಲಕ್ಷ ಡಾಲರ್‌ಗೆ (ಸುಮಾರು ರೂ. 13 ಕೋಟಿ) ಹರಾಜಾಗಿದೆ.

- ಈ ವರ್ಷಾಂತ್ಯದ ವೇಳೆಗೆ ಭಾರತದಲ್ಲಿ ಮೊಬೈಲ್ ಬಳಕೆದಾರರ ಸಂಖ್ಯೆ ಕೋಟಿಗೆ ದಾಟುವ ನಿರೀಕ್ಷೆ ಇದೆ. ಕೈಗೆಟಕುವ ಬೆಲೆಗೆ ಸಿಗುತ್ತಿರುವ ಮೊಬೈಲ್ ಸಾಧನಗಳು, ಭರಿಸಬಹುದಾದ ಶುಲ್ಕ ಮತ್ತು ಡಿಜಿಟಲ್ ಸಾಕ್ಷರತೆಯ ಕಾರ್ಯಕ್ರಮಗಳಿಂದಾಗಿ ಮೊಬೈಲ್ ಗ್ರಾಹಕರ ಸಂಖ್ಯೆ ತ್ವರಿತ ಗತಿಯಲ್ಲಿ ಹೆಚ್ಚಾಗುತ್ತಿದೆ ಎಂದು ಜಿ.ಎಸ್.ಎಂ ಟೆಲಿಕಾಂ ಕಂಪನಿಗಳ ಜಾಗತಿಕ ಸಂಸ್ಥೆ ಜಿಎಸ್‌ಎಂಎ ತಿಳಿಸಿದೆ.

ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು (1 ಯೋಹಾ. 3:2).

# ತಲೆನೋವು ಮುಕ್ತಿಗೆ ಸರಳ ಉಪಾಯ :

ಆರೋಗ್ಯ ಸ್ವರ

ತಲೆನೋವು, ಜನರನ್ನು ಸಾಮಾನ್ಯವಾಗಿ ಕಾಡುವ ಕಾಯಿಲೆ. ಕೆಲವರಿಗಂತೂ ನೋವು ನಿವಾರಕ ಔಷಧಗಳನ್ನು ತೆಗೆದುಕೊಳ್ಳುವವರೆಗೂ ಇದು ಹೋಗಲ್ಲ. ಆದರೆ ಔಷಧವಿಲ್ಲದೆಯೂ ಕೇವಲ ಮನೆಯಲ್ಲಿ ಮಾಡಬಹುದಾದ ಸರಳ ವಿಧಾನದಿಂದಲೂ ತಲೆನೋವನ್ನು ಹೋಗಲಾಡಿಸಬಹುದು.

ನಿಮ್ಮನ್ನು ಹೈಡ್ರೇಟ್ ಮಾಡಿ: ತಲೆನೋವಿನ ಪೈಕಿ ನಿರ್ಜಲೀಕರಣವು ಒಂದು ಪ್ರಮುಖ ಕಾರಣವಾಗಿದೆ. ದ್ರವ ಆಹಾರವಾದ ನೀರು ಮತ್ತು ತಾಜಾ ಹಣ್ಣಿನ ರಸವನ್ನು ಅಧಿಕವಾಗಿ ಸೇವಿಸಿ. ಕೆಫಿನ್ ಅಂಶವುಳ್ಳ ಕಾಫಿ ಮತ್ತು ಟೀ ಅನ್ನು ಅದಷ್ಟು ದೂರವಿರಿಸಿ. ಇವು ದೇಹವನ್ನು ನಿರ್ಜಲೀಕರಣಗೊಳಿಸಬಹುದು.

ತಲೆಯ ಮಸಾಜ್: ನೋವು ಇರುವ ಜಾಗದಲ್ಲಿ ತೋರುಬೆರಳು ಅಥವಾ ಹೆಬ್ಬೆರಳಿನಿಂದ ಚೆನ್ನಾಗಿ ಮಸಾಜ್ ಮಾಡಿ. ಅದೇ ರೀತಿಯ ಒತ್ತಡವನ್ನು 7–15 ಸೆಕೆಂಡ್ ಹಾಗೆಯೇ ಮುಂದುವರಿಸಿ. ಅನಂತರ ಬಿಟ್ಟು ಬಿಡಿ. ಅಗತ್ಯವಿದ್ದರೆ ಅದನ್ನು ರಿಪೀಟ್ ಮಾಡಿ. ಮಸಾಜ್ ಮಾಡಿದರೆ ಬಿಗಿಯಾಗಿರುವ ಸ್ನಾಯುಗಳು ಸಡಿಲಗೊಳ್ಳುತ್ತವೆ ಮತ್ತು ರಕ್ತ ಸಂಚಾರ ಸುಧಾರಿಸುತ್ತದೆ.

ಸಮತೋಲಿನ ಆಹಾರ ಪದ್ಧತಿಯನ್ನು ಅನುಸರಿಸಿ ಸಮತೋಲಿತ ಆಹಾರ ಸೇವಿಸಬೇಕು ಮತ್ತು ಆಹಾರ ಕ್ರಮಕ್ಕೆ ಸರಿಯಾದ ಸಮಯವನ್ನು ಪಾಲಿಸಬೇಕು. ದಿನದಲ್ಲಿ ಸೇವಿಸುವ ನಾಲ್ಕು ಊಟದ ಸಮಯಕ್ಕೂ ಒಂದು ನಿಗದಿತ ವೇಳಾಪಟ್ಟಿಯನ್ನು ಹಾಕಿಕೊಳ್ಳಿ. ಮಿದುಳಿಗೆ ಗ್ಲುಕೋಸ್‌ನ ಅಗತ್ಯವಿರುತ್ತದೆ. ಗ್ಲುಕೋಸ್ ಅಭಾವವು ಹೈಪೊಗ್ಲಿಸಿಮಿಯಾವನ್ನು ಉಂಟು ಮಾಡುತ್ತದೆ. ಇದರಿಂದಾಗಿ ತಲೆನೋವು ಉಂಟಾಗುತ್ತದೆ. ನೀವು ಸರಿಯಾದ ಸಮಯಕ್ಕೆ ಆಹಾರ ಸೇವಿಸಿದರೆ ದೇಹದ ಚಯಾಪಚಯವು ಸರಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಸಾಕಷ್ಟು ನಿದ್ರೆ ಸರಿಯಾದ ಭಂಗಿಯಲ್ಲಿ ಸಾಕಷ್ಟು ಸಮಯ ನಿದ್ರೆ ಮಾಡುವುದು ಅತಿ ಅಗತ್ಯ. ಕಡಿಮೆ ನಿದ್ರೆ ಅಥವಾ ಅಡಚಣೆಯ ನಿದ್ರೆಯು ನಿಮ್ಮ ಸುಖ ನಿದ್ರೆಗೆ ಭಂಗ ತರಬಹುದು. ಮನುಷ್ಯನಿಗೆ ಸರಾಸರಿ 6–8 ಗಂಟೆ ಕಾಲ ನಿರಂತರ ನಿದ್ರೆಯು ಅಗತ್ಯವಾಗಿ ಬೇಕು ಮತ್ತು ತಲೆದಿಂಬಿನ ಎತ್ತರವು ಅತಿಯಾಗಿ ಇರಬಾರದು.

ವಿಶ್ರಾಂತಿ ತೆಗೆದುಕೊಳ್ಳಿ: ಕಣ್ಣುಗಳನ್ನು ಮುಚ್ಚಿಕೊಳ್ಳಿ ಒತ್ತಡವನ್ನು ಹೊರಹಾಕಲು ಪ್ರಯತ್ನಿಸಿ ಬೆನ್ನು ಕುತ್ತಿಗೆ ಮತ್ತು ಭುಜದಲ್ಲಿರುವ ಒತ್ತಡವನ್ನು ನಿಧಾನವಾಗಿ ಹೊರಹಾಕಿ. ಮುಂದಕ್ಕೆ ಬಾಗುವುದನ್ನು ಅದಷ್ಟು ತಪ್ಪಿಸಿ.

ಹಾಟ್ ಶವರ್: ಶವರ್ ಕೆಳಗೆ ನಿಂತುಕೊಳ್ಳಿ ಮತ್ತು ಬಿಸಿನೀರು ನಿಮ್ಮ ತಲೆಮೇಲೆ ಚೆನ್ನಾಗಿ ಬೀಳಲಿ. ಬೆನ್ನು ಮತ್ತು ಕತ್ತನ್ನು ಚೆನ್ನಾಗಿ ಬಗ್ಗಿಸಿ ಬಿಸಿನೀರು ಅಲ್ಲಿಗೂ ಬೀಳುವಂತೆ ನೋಡಿಕೊಳ್ಳಿ, ತಲೆ ಮತ್ತು ಕುತ್ತಿಗೆಯ ಸ್ನಾಯುಗಳನ್ನು ಸಡಿಲಗೊಳಿಸಿ ಮತ್ತು ರಕ್ತ ಸಂಚಾರ ಚೆನ್ನಾಗಿ ಅಗಲು ಅವಕಾಶ ನೀಡಿ.

ನಗಲು ಮತ್ತು ಹಾಸ್ಯ ಮಾಡಲು ಪ್ರಯತ್ನಿಸಿ. ಸಣ್ಣ ಪ್ರಮಾಣದಲ್ಲಿ ತಲೆನೋವು ಇದ್ದರೆ ನಗುವು ಈ ನೋವನ್ನು ವಾಸಿ ಮಾಡಿರುವುದು ಸಾಬೀತು ಆಗಿದೆ. ಮಂದಹಾಸ ಮತ್ತು ನಗು ಮಿದುಳಿನ ಒಳಗೆ ಎಂಡೋರ್ಫಿನ್ಸ್ ಅನ್ನು ಬಿಡುಗಡೆ ಮಾಡುತ್ತದೆ. ಕಿರುನಗೆ ಮತ್ತು ನಗು ಮಿದುಳಿನಲ್ಲಿ ಹಿತಾನುಭವದ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ನೀವು ಹೆಚ್ಚು ನಕ್ಕರೆ ಇಂಥ ರಾಸಾಯನಿಕಗಳು ಅಧಿಕ ಪ್ರಮಾಣದಲ್ಲಿ ಬಿಡುಗಡೆಯಾಗುತ್ತದೆ. ಎಂಡೋರ್ಫಿನ್ಸ್ ನೋವು ನಿವಾರಿಸಲು ನೆರವಾಗುತ್ತದೆ.

ರಿಲ್ಯಾಕ್ಸ್ ಮತ್ತು ನಿಮ್ಮ ಹೃದಯ ಏನು ಹೇಳುತ್ತದೆ ಅದನ್ನೇ ಮಾಡಿ : ತಲೆನೋವು ಉಂಟಾದ ಸಂದರ್ಭದಲ್ಲಿ ಮ್ಯೂಸಿಕ್ ಚೆನ್ನಾಗಿ ಕೆಲಸ ಮಾಡುತ್ತದೆ. ಇದು ಒತ್ತಡವನ್ನು ಕಡಿಮೆ ಮಾಡಲು ನೆರವಾಗುತ್ತದೆ. ಇವಲ್ಲದೆ ನಿಮ್ಮ ಕಣ್ಣುಗಳನ್ನು ಮುಚ್ಚಿ ಮತ್ತು ಆಹ್ಲಾದ ನೀಡುವ ಆಲೋಚನೆಯನ್ನು ಮಾಡಿ.

ತಾಜಾ ಗಾಳಿಯನ್ನು ಉಸಿರಾಡಿ: ಡೀಪ್ ಬ್ರೀತ್ ವ್ಯಾಯಾಮ ಕೂಡ ತಲೆನೋವಿನಿಂದ ಮುಕ್ತಿ ಕೊಡುತ್ತದೆ. ಆದರೆ ತಾಜಾ ಗಾಳಿಯನ್ನು ಸೇವಿಸಿಕೊಂಡು ಉಸಿರಾಡಿದರೆ ಹೆಚ್ಚಿನ ಪರಿಣಾಮ ಬೀರುತ್ತದೆ.

ಕೊತ್ತಂಬರಿ ಸೊಪ್ಪಿನ ಕಷಾಯ: ನೀರಿಗೆ ಸ್ವಲ್ಪ ಕೊತ್ತಂಬರಿ ಸೊಪ್ಪು ಹಾಕಿ ಚೆನ್ನಾಗಿ ಕುದಿಸಿ. ಅನಂತರ ಸ್ಟವ್ ಆಫ್ ಮಾಡಿ. ಅದಕ್ಕೆ ಅರ್ಧ ಚಮಚ ಟೀ ಎಲೆಗಳನ್ನು ಹಾಕಿ ಮುಚ್ಚಿಡಿ. ಕೆಲವು ನಿಮಿಷ ಕಳೆದ ಮೇಲೆ ಅದನ್ನು ಸೋಸಿ ಕುಡಿಯಿರಿ. ಅದಕ್ಕೆ ಸಿಹಿ ಹಾಕುವುದು ಬೇಡ.

ಶುಂಠಿ ಕಷಾಯ ಸ್ವಲ್ಪ ಶುಂಠಿಯನ್ನು ನೀರಿಗೆ ಹಾಕಿ ಚೆನ್ನಾಗಿ ಕುದಿಸಿ. ಅನಂತರ ಅದನ್ನು ಸೋಸಿ. ಅದಕ್ಕೆ ಕೆಲವು ಹನಿ ಜೇನುತುಪ್ಪ ಬೆರೆಸಿ ಕುಡಿಯಿರಿ.

ಕ್ಯಾಮೋಮೈಲ್ ಟೀ ನಿಮಗೆ ಒತ್ತಡದಿಂದ ತಲೆನೋವು ಬಂದಿದ್ದರೆ ಕ್ಯಾಮೋಮೈಲ್ ಟೀಯು ಅದ್ಭುತವಾಗಿ ಕೆಲಸ ಮಾಡುತ್ತದೆ. ಸಾವಯವ ಅಂಗಡಿಗಳಲ್ಲಿ ಒಣಗಿದ ಕ್ಯಾಮೋಮೈಲ್ ಹೂಗಳು ಸಿಗುತ್ತವೆ. ಚೆನ್ನಾಗಿ ಕುದಿಸಿದ ಒಂದು ಗ್ಲಾಸ್ ನೀರಿಗೆ ಕೆಲವು ಹೂಗಳನ್ನು ಹಾಕಿ ಮುಚ್ಚಿಡಿ. ಅನಂತರ ಅದನ್ನು ಸೋಸಿ ಅದಕ್ಕೆ ಕೆಲವು ಹನಿ ಜೇನುತುಪ್ಪ ಸೇರಿಸಿ ಕುಡಿದರೆ ತಲೆನೋವು ಕಡಿಮೆಯಾಗುತ್ತದೆ.

ಸಂಗ್ರಹ.

ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮ ಪದವಿಯನ್ನು ಆಲೋಚಿಸಿ,
ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ (ರೋಮಾ. 8:18).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 0091 9902334941**

## ನಿಮ್ಮೆಗೆಲ್ಲಾ ಸಂತಸ ಸುದ್ಧಿ

# VOICE OF GOD
(ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

### ಆಶ್ರಮದ ಅವಶ್ಯಕತೆಗಳು

1. ವಾಷಿಂಗ್ ಮಿಷನ್ (500ಕೆ.ಜಿ.).
2. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**0091 9902334941, 0091 8202002781, 0091 9964070654**

ಪ್ರಭಾವ ಹೊಂದುವದಕ್ಕೆ ತಾನು ಮುಂದಾಗಿ ಸಿದ್ಧ ಮಾಡಿದ ಕರುಣಾಪಾತ್ರದಲ್ಲಿ ತನ್ನ ಮಹಿಮಾತಿಶಯವನ್ನು ತೋರ್ಪಡಿಸಿದ್ದಾನೆ (ರೋಮಾ. 9:23).

# ಶಿಷ್ಯರಿಗೆ ಅಭಿಷೇಕ

"ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" (ಅ.ಕೃ. 1:8).

ಕ್ರಿಸ್ತನು ಪರಲೋಕಕ್ಕೇರುವ ಮೊದಲು ಶಿಷ್ಯರಿಗೆ ಒಂದು ವಾಗ್ದಾನವನ್ನು ಕೊಟ್ಟನು. "ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದು ಕೊಂಡಿರ್ರಿ" (ಲೂಕ. 24:49).

ಕ್ರಿಸ್ತನು ಪರಲೋಕಕ್ಕೇರಿದ ನಂತರ ಶಿಷ್ಯರು ಬಹಳ ಸಂಕಟವನ್ನು ಅನುಭವಿಸಿದರು. ತಾಯಿಯಿಲ್ಲದ ತಬ್ಬಲಿಗಳಂತೆ ಆಶ್ರಯವಿಲ್ಲದೆ ಪರಿತಪಿಸಿದರು. ಶಿಷ್ಯರ ಮೇಲೆ ಉರಿದ್ದೆದ್ದ ಯೆಹೂದ್ಯರು, ಕೊಲೆ ಮಾಡಲು ಯತ್ನಿಸುತ್ತಿದ್ದ ಫರಿಸಾಯರು ನಿಂದೆಯ ನುಡಿಗಳಿಂದಲೇ ಕೊಲ್ಲುತ್ತಿದ್ದ ಶಾಸ್ತ್ರಿಗಳು ಇವರೆಲ್ಲರ ಮಧ್ಯದಲ್ಲಿ ಶಿಷ್ಯರು ಆತ್ಮ ಬಲವಿಲ್ಲದವರಾಗಿ ನಡುಗಿದರು. ಯೆರೂಸಲೇಮಿನ ಬೀದಿಗಳಲ್ಲಿ ಸಹ ನಡೆಯಲು ಅವರು ಭಯಪಟ್ಟರು. ಇಂಥ ಪರಿಸ್ಥಿತಿಯಲ್ಲಿ ಅವರನ್ನು ಆದರಣೆ ಪಡಿಸಿದ್ದು ಯೇಸುಕ್ರಿಸ್ತನು ನುಡಿದ ವಾಗ್ದಾನ ವಚನಗಳು.

ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲಹೊಂದುವಿರಿ. ಉನ್ನತ ಬಲವನ್ನು ಹೊಂದಿಕೊಳ್ಳುವಿರಿ. ನರಮನುಷ್ಯರೆಲ್ಲರ ಮೇಲೂ ನನ್ನ ಆತ್ಮವನ್ನು ಸುರಿಸುವೆನು ಇದೇ ಕರ್ತನು ಮಾಡಿದ ವಾಗ್ದಾನವಲ್ಲವೇ.

ಪಂಚಾಶತ್ತಮ ಹಬ್ಬವು ಸಮೀಪಿಸುತ್ತಿದ್ದ ದಿನಗಳಲ್ಲಿ ದೇಶದ ಎಲ್ಲಾ ಭಾಗಗಳಲ್ಲಿದ್ದ ಜನರು ಯೆರೂಸಲೇಮಿನಲ್ಲಿ ಕೂಡಿಬಂದಿದ್ದರು. ಆ ದಿನಗಳಲ್ಲಿ ನಡೆದ ಯೇಸುಕ್ರಿಸ್ತನ ಶಿಲುಬೆಯ ಮರಣದ ಬಗ್ಗೆ ಅವರೆಲ್ಲರ ತರ್ಕಗಳು, ವಿವಾದಗಳು ಶಿಷ್ಯರನ್ನು ಇನ್ನೂ ಭಯಪಡಿಸಿದ್ದಿರಬಹುದು. ಕ್ರಿಸ್ತನ ಶ್ರಮೆ ಮರಣ ಅವರ ನೆನಪಿನಲ್ಲಿ ಹಸಿದಾಗಿಯೇ ಉಳಿದಿದ್ದ ದಿನಗಳು, ಭಯ ಕಳವಳ ಚಿಂತೆಗಳಿಂದ ಕೂಡಿದ ಶಿಷ್ಯರು, ಕರ್ತನು ವಾಗ್ದಾನ ಮಾಡಿದ ಪವಿತ್ರಾತ್ಮನಿಗಾಗಿ ಎದುರು ನೋಡುತ್ತಾ ಕಾದಿದ್ದರು.

ಜಗತ್ತಿಗೆಲ್ಲಾ ಸುವಾರ್ತೆ ಸಾರಿರಿ ಎಂದು ಕರ್ತನು ಅಪ್ಪಣೆ ಕೊಟ್ಟಿದ್ದನು. ಆದರೆ ಹೋಗಲು ಧೈರ್ಯವೂ ಬಲವೂ ಬೇಕಲ್ಲವೇ? ನೋಡಿರಿ, ಶಿಷ್ಯರ ಮನಸ್ಸಿನಲ್ಲಿ ಅನೇಕ ಕಲ್ಪನೆಗಳು, ಅನೇಕ ಕಳವಳಗಳು, ಇಂಥ ಪರಿಸ್ಥಿತಿಯಲ್ಲಿ ಉನ್ನತ ಬಲವೂ ಮಹಿಮೆಯು ಅವರ ಮೇಲೆ ಇಳಿಯಿತು. ಸತ್ಯವೇದ ಹೇಳುತ್ತದೆ, "ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರೂ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ಧವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರೂ ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು" (ಅ.ಕೃ.2:1–4). ಆ ದಿನಗಳು ಬಹಳ ಮಹಿಮೆಯುಳ್ಳ ದಿನಗಳು. ಪವಿತ್ರಾತ್ಮನಾದಾತನ ಕಾಲವು ಆರಂಭಿಸಿದ ದಿನಗಳು, ಸಾಧಾರಣವಾದ ಮನುಷ್ಯರು ಆಶೀರ್ವದಿಸಲ್ಪಟ್ಟು, ಅಪೊಸ್ತಲರಾಗಿ ಮಾರ್ಪಟ್ಟ ದಿನ. ಕ್ರಿಸ್ತನ ಮದುವಣಗಿತ್ತಿಯಾದ ಸಭೆ ಉದ್ಭವಿಸಿದ ದಿನಗಳು. ಈ ಅಧ್ಯಾಯದಲ್ಲಿ, ಪವಿತ್ರಾತ್ಮನ ಅಭಿಷೇಕದಿಂದ ಅವರ ಜೀವಿತದ ಮಾರ್ಪಾಟನ್ನೂ ಮಹಿಮೆಯಾದ ಸೇವೆಯನ್ನು ಕುರಿತು ಧ್ಯಾನಿಸೋಣ.

**ಅಭಿಷೇಕವು ನಾನಾ ಭಾಷೆಗಳನ್ನು ನುಡಿಸುತ್ತದೆ** :– ಶಿಷ್ಯರು ಅಭಿಷೇಕಿಸಲ್ಪಟ್ಟಾಗ ಮಾತಿನಲ್ಲಿ ಮಾರ್ಪಾಟು ಉಂಟಾಯಿತು. ಅಗ್ನಿಮಯವಾದ ಉರಿಯುತ್ತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವಂತೆ ವಿಂಗಡಿಸಿಕೊಂಡು ಅವರ ಮೇಲಿಳಿಯಿತು. ಅಂದು ಪ್ರವಾದಿಯಾದ ಯೆಶಾಯನನ್ನು ಅಭಿಷೇಕಿಸಿದಾಗ ಸ್ಪರ್ಶಿಸಲ್ಪಟ್ಟದ್ದು ಅವನ ನಾಲಿಗೆ, ಅದರಂತೆ ಶಿಷ್ಯರ ನಾಲಿಗೆ ಮೇಲಿಳಿದ ಆತನ ಅಭಿಷೇಕ ಧೈರ್ಯವಾಗಿ ಕ್ರಿಸ್ತನನ್ನು ಪ್ರಸಂಗಿಸುವಂತೆ ಮಾಡಿತು.

ಹಡಗುಗಳನ್ನು ಚುಕ್ಕಾಣಿ ತಿರುಗಿಸುವಂತೆ ಕಡಿವಾಣವು ಕುದುರೆಯನ್ನು ತಿರುಗಿಸುವಂತೆ, ನಾಲಿಗೆಯು ವೈಯಕ್ತಿಕ ಜೀವನವನ್ನೇ ಮಾರ್ಪಡಿಸುವಂಥದ್ದಾಗಿದೆ. ಆದ್ದರಿಂದಲೇ ಆತ್ಮನು ಮೊಟ್ಟಮೊದಲು ನಾಲಿಗೆಯನ್ನೇ ಮುಟ್ಟಿದನು. ಶಿಷ್ಯರು ಆ ನಾಲಿಗೆಯಿಂದ ಬೇರೆ ಬೇರೆ ಭಾಷೆಗಳನ್ನು ಮಾತನಾಡಿದರು. ಅಪೊಸ್ತಲನಾದ ಪೌಲನು ಭಾಷೆಗಳನ್ನು ಎರಡು ಬಗೆಯಾಗಿ ವಿಂಗಡಿಸುತ್ತಾನೆ.

**1) ಮನುಷ್ಯರ ಭಾಷೆಗಳು 2) ದೇವ ದೂತರ ಭಾಷೆಗಳು.**

ಅಂದು ಅಭಿಷೇಕ ಹೊಂದಿದ ಶಿಷ್ಯರು ಮನುಷ್ಯರ ಭಾಷೆಗಳನ್ನೇ ಮಾತನಾಡಿದರು. ಸತ್ಯವೇದವು ಹೇಳುತ್ತದೆ, "ಆ ಸಪ್ಪಳವಾದಾಗ ಜನರು ಗುಂಪುಗುಂಪಾಗಿ ಕೂಡಿಬಂದು ಪ್ರತಿಯೊಬ್ಬರು ತಮ್ಮ ತಮ್ಮ ಭಾಷೆಯಲ್ಲೇ ಇವರು ಮಾತಾಡುವದನ್ನು ಕೇಳಿ ಭ್ರಮೆಗೊಂಡರು" (ಅ.ಕೃ. 2:6). ಯೆಹೂದ್ಯ ಮಾತಾವಲಂಬಿಗಳೂ ಕ್ರೇತ್ಯರೂ ಅರಬ್ಬೀ ದೇಶದವರೂ ಆಗಿರುವ ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇವರ, ದೇವರ ಮಹತ್ತುಗಳ ವಿಷಯವಾಗಿ

ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ (ಯೋಹಾ. 1:14).

ಹೇಳುವುದನ್ನು ಕೇಳುತ್ತೇವೆ ಅಂದುಕೊಂಡರು. ಅವರು ನಾನಾ ಭಾಷೆಗಳಲ್ಲಿ ದೇವರ ಮಹತ್ವಗಳನ್ನು ಕುರಿತು ಮಾತಾಡಿದರು. ಇದು ಅನೇಕರ ರಕ್ಷಣೆಗೆ ಮೂಲವಾಯಿತು.

ನನ್ನ ವೈಯಕ್ತಿಕ ಜೀವನದಲ್ಲಿ ಕರ್ತನು ನನ್ನನ್ನು ಅಭಿಷೇಕಿಸಿದಾಗ ರಮ್ಯವಾಗಿ ನಾನಾ ಭಾಷೆಗಳನ್ನಾಡಿ ಉಲ್ಲಾಸಗೊಂಡೆನು. ನನ್ನ ಮನಸ್ಸಿನಲ್ಲಿ ಪ್ರಾರ್ಥಿಸಲಾರಂಭಿಸುವಾಗ ತಮಿಳು ಭಾಷೆಯಲ್ಲಿ ಪ್ರಾರಂಭವಾದ ಪ್ರಾರ್ಥನೆ, ನಾನಾ ಭಾಷೆಗಳಾಗಿ ಹೊರಬರುತ್ತಿದ್ದವು. ಆದ್ದರಿಂದ ಪ್ರಾರ್ಥಿಸುವಾಗ ಆತ್ಮನಿಂದಲೂ ಬುದ್ಧಿಯಿಂದಲೂ ಪ್ರಾರ್ಥಿಸಲು ಕಲಿತುಕೊಂಡೆನು.

ಕೆಲವು ವೇಳೆಗಳಲ್ಲಿ ನಾನು ಸಭೆಯಾಗಿಯಾಗಲಿ ಅಥವಾ ಪ್ರತ್ಯೇಕವಾದ ವ್ಯಕ್ತಿಗಾಗಿಯಾಗಲೀ, ಪ್ರಾರ್ಥಿಸುವಾಗ ಬೇರೆ ಭಾಷೆಯಲ್ಲಿ ಪ್ರಾರ್ಥಿಸಿ ಅದಕ್ಕೆ ಅರ್ಥ ಹೇಳುತ್ತಿದ್ದುದುಂಟು. ಕೆಲವು ವೇಳೆಗಳಲ್ಲಿ ಬೇರೆಯವರು ಆಡುವ ಭಾಷೆಗೆ ಅರ್ಥ ಹೇಳುತ್ತಿದ್ದುದುಂಟು. ಅಪೊಸ್ತಲನಾದ ಪೌಲನು ತನ್ನ ಅನುಭವವನ್ನು ಕುರಿತು ಕೊರಿಂಥ ಸಭೆಗೆ ಹೇಳುವಾಗ "ನಾನು ನಿಮ್ಮೆಲ್ಲರಿಗಿಂತಲೂ ಹೆಚ್ಚಾಗಿ ವಾಣಿಗಳನ್ನಾಡುತ್ತೇನೆಂದು ದೇವರನ್ನು ಕೊಂಡಾಡುತ್ತೇನೆ" (1 ಕೊರಿ. 14:18) ಎಂದು ಹೇಳುತ್ತಾನೆ. ವಾಣಿಯನ್ನಾಡುವವನು ತನಗೆ ಮಾತ್ರ ಭಕ್ತಿ ವೃದ್ಧಿಯನ್ನುಂಟು ಮಾಡುತ್ತಾನೆ. ಪ್ರವಾದಿಸುವವನು ಸಭೆಗೆ ಭಕ್ತಿ ವೃದ್ಧಿಯನ್ನುಂಟು ಮಾಡುತ್ತಾನೆ (1 ಕೊರಿ. 14:4) ಎಂದು ಬರೆದದೆ.

ಒಬ್ಬ ಬೋಧಕರಿದ್ದರು. ಅವರು ಪವಿತ್ರಾತ್ಮನನ್ನಾಗಲಿ ಭಾಷೆಗಳನ್ನಾಗಲಿ ನಂಬದವರಾಗಿದ್ದರು. ಒಂದು ದಿನ ಅವರು ಒಂದು ಪರಿಶೋಧನೆಗಿಳಿದರು, ಪವಿತ್ರಾತ್ಮಭರಿತವಾಗಿ ನಡೆಸಲ್ಪಡುತ್ತಿದ್ದ ಒಂದು ಪ್ರಾರ್ಥನಾಕೂಟಕ್ಕೆ ತನ್ನ ಟೇಪ್ ರಿಕಾರ್ಡರ್ ಸಹಿತ ಹೋದರು. ಪವಿತ್ರಾತ್ಮನಿಂದ ಪ್ರೇರಿತರಾಗಿ ನಾನಾ ಭಾಷೆಗಳನ್ನಾಡುತ್ತಿದ್ದಂಥ ಪ್ರತಿಯೊಬ್ಬೊಬ್ಬರ ಮಾತುಗಳನ್ನು ರೆಕಾರ್ಡ್ ಮಾಡಿಕೊಂಡರು. ಹೀಗೆ 49 ಮಂದಿಯ ಮಾತುಗಳನ್ನು ಧ್ವನಿ ಮುದ್ರಣ ಮಾಡಿಕೊಂಡ ತರುವಾಯ ಅದೇ ಮುದ್ರಣದಲ್ಲಿ ತನ್ನ ಬಾಯಿಂದ ಬರುವ ಎಲ್ಲಾ ಮಾತುಗಳನ್ನು ನಾನಾ ಭಾಷೆಯಂತೆ ಶೇಖರಿಸಿಕೊಂಡರು. ಹೀಗೆ ಶೇಖರಿಸಿದ ಧ್ವನಿ ಮುದ್ರಣದ ಟೇಪನ್ನು ಅಮೆರಿಕಾ ದೇಶದ ಒಂದು ಸರ್ವಕಲಾ ಶಾಲೆಗೆ ಸಂಶೋಧನೆಗಾಗಿ ಕಳುಹಿಸಿ, ಅದರಲ್ಲಿರುವ ಭಾಷೆಗಳಾವವು ಅದರ ಅರ್ಥವೇನು ಎಂಬದನ್ನು ಕಂಡು ಹಿಡಿಯುವಂತೆ ಹೇಳಿದರು. ಅದೇ ರೀತಿಯಾಗಿ ಸಾವಿರಾರು ಭಾಷೆಗಳನ್ನಾಡಬಲ್ಲ ಭಾಷಾ ನಿಪುಣರು ಇದ್ದಂಥ ಸ್ಥಳಗಳಲ್ಲಿ ಈ ಧ್ವನಿ ಮುದ್ರಣವನ್ನು ಆಲಿಸಲಾಯಿತು. ಅಲ್ಲಿದ್ದಂಥ ಭಾಷಾ ಪ್ರವೀಣರು ತಮ್ಮ ತಮ್ಮ ಭಾಷೆಗಳನ್ನು ಕಂಡುಕೊಂಡು ಭಾಷಾಂತರ ಮಾಡಲಾರಂಭಿಸಿದರು, 49 ಭಾಷೆಗಳಾವವು ಎಂದೂ ಅವುಗಳ ಅರ್ಥವೇನೆಂಬದನ್ನೂ ಕಂಡು ಹಿಡಿದರು, 50ನೇ ದಾಗಿ ಮುದ್ರಿಸಲ್ಪಟ್ಟ ಭಾಷೆ, ಯಾರಿಗೂ ಅರ್ಥವಾಗದೆ ಭಾಷೆ ಎಂಬುದಾಗಿಯೂ "ಅದು ಒಬ್ಬ ಹುಚ್ಚನ ಬೊಗಳೆ ಮಾತು" ಎಂದು ಹೇಳಿದರು. ನಾನಾ ಭಾಷೆಯನ್ನೂ ಪವಿತ್ರಾತ್ಮನನ್ನೂ ನಂಬಿದ್ದಂಥ ಆ ಬೋಧಕರು ಅಂದೇ ತನ್ನನ್ನು ಪೂರ್ಣವಾಗಿ ಕರ್ತನಿಗೆ ಒಪ್ಪಿಸಿ ನಾನಾ ಭಾಷೆಗಳನ್ನು ನಂಬಿದರು.

2. **ಅಭಿಷೇಕವು ಒಂದು ಗೂಡಿಸುತ್ತದೆ** :– ಪಂಚಾಶತ್ತಮ ದಿನದಲ್ಲಿ ಆಕಾಶದ ಕೆಳಗಿರುವ ಎಲ್ಲಾ ದೇಶದವರೊಳಗಿಂದ ಬಂದಂಥ ಭಕ್ತಿಯುಳ್ಳ ಯೆಹೂದ್ಯರೆಲ್ಲರೂ ಯೆರೂಸಲೇಮಿನಲ್ಲಿ ಕೂಡಿಬಂದರು. ಒಬ್ಬರ ಭಾಷೆ ಮತ್ತೊಬ್ಬರಿಗೆ ಅರ್ಥವಾಗದೆಯಿದ್ದದರಿಂದ, ಶಿಷ್ಯರು ಸಾಧಾರಣವಾಗಿ ಯಾರೊಂದಿಗೂ ಮಾತನಾಡಲಾರದಂಥಾ ಪರಿಸ್ಥಿತಿಯಲ್ಲಿದ್ದರು. ಆದರೆ ನಾನಾ ಭಾಷೆಯ ಮೂಲಕ ಆಯಾ ಭಾಷೆಯವರ ಬಳಿ ವೈಯಕ್ತಿಕವಾಗಿ ಕರ್ತನು ಮಾತನಾಡಿದನು.

ಹಳೇ ಒಡಂಬಡಿಕೆಯನ್ನು ನಾವು ಓದುವಾಗ, ಆದಿಯಲ್ಲಿ ಜನರು ಬಾಬೆಲ್ ಗೋಪುರವನ್ನು ಕಟ್ಟಲಾರಂಭಿಸಿದಾಗ, ಕರ್ತನು ಅವರ ಭಾಷೆಯನ್ನು ತಾರುಮಾರು ಮಾಡಿದನೆಂದೂ, ಆದದರಿಂದ ಅವರು ಲೋಕದ ಎಲ್ಲಾ ಕಡೆಗಳಿಗೂ ಚದರಿಸಲ್ಪಟ್ಟರೆಂದು ನೋಡುತ್ತೇವೆ. ಆದರೆ ಹೊಸ ಒಡಂಬಡಿಕೆಯ ದಿನಗಳಲ್ಲಿ, ಪವಿತ್ರಾತ್ಮನು ಸುರಿಸಲ್ಪಟ್ಟಂಥ ದಿನಗಳಲ್ಲಿ ಪವಿತ್ರಾತ್ಮನು ಅನೇಕ ಭಾಷೆಗಳನ್ನು ಮಾತನಾಡುವವರನ್ನು ಒಂದು ಗೂಡಿಸಿದನೆಂಬದನ್ನು ನಾವು ನೋಡುತ್ತೇವೆ. ಮಾತ್ರವಲ್ಲದೆ, ಅಭಿಷೇಕದ ಮೂಲಕ ಮನುಷ್ಯ ಭಾಷೆಗಳನ್ನು ಮಾತನಾಡಿದ್ದಲ್ಲದೆ ದೇವದೂತರ ಭಾಷೆಗಳನ್ನು ಸಹ ಮಾತನಾಡುವದರಿಂದ ಭೂಲೋಕಕ್ಕೂ ಪರಲೋಕಕ್ಕೂ ಅನ್ಯೋನ್ಯತೆಯು ಏರ್ಪಡುವದು. ಆದ್ದರಿಂದ ನಾನಾ ಭಾಷೆಗಳು, ಹಲವು ಮತದವರನ್ನು ಒಂದು ಗೂಡಿಸುವದಲ್ಲದೆ, ಅನೇಕ ಭಾಷೆಗಳನ್ನಾಡುವವರನ್ನೂ ಸಹ ಒಂದು ಗೂಡಿಸುತ್ತದೆ ಮತ್ತು ದೇವದೂತರನ್ನೂ, ಇಡೀ ಪರಲೋಕವನ್ನೇ ನಮ್ಮೊಂದಿಗೆ ಒಂದು ಗೂಡಿಸುತ್ತದೆ. ಈ ಹೊಂದಾಣಿಕೆಯ ಕಾರ್ಯವನ್ನು ಪವಿತ್ರಾತ್ಮನು ತಾನೇ ನಡೆಸುವಂಥದ್ದೇ ನಮಗೆ ಭಾಗ್ಯದಾಯಕವಾದದ್ದಾಗಿದೆ.

ಈ ಅಭಿಷೇಕದಿಂದ ಶಿಷ್ಯರಲ್ಲಿ ಏಕ ಮನಸ್ಸು ಉಂಟಾಯಿತು. 14ನೇ ವಚನವನ್ನು ಓದಿ ನೋಡಿರಿ. "ಆಗ ಪೇತ್ರನು ಹನ್ನೊಂದು ಮಂದಿ ಅಪೋಸ್ತಲರ ಸಹಿತ ಎದ್ದುನಿಂತು ಘಟ್ಟಿಯಾದ ಧ್ವನಿಯಿಂದ ಎಂದು ಹೇಳಿದೆ. ಇಲ್ಲಿ ಪ್ರಸಂಗ ಮಾಡುತ್ತಿರುವ ಪೇತ್ರನೊಂದಿಗೆ ಉಳಿದ ಹನ್ನೊಂದು ಮಂದಿ ಏಕಮನಸ್ಸಿನಿಂದ ಒಂದು ಗೂಡಿದ್ದರೆಂದು ನೋಡುತೇವೆ. ಹೌದು, ಅಭಿಷೇಕವು ಅವರಲ್ಲಿ ಏಕಮನಸ್ಸನ್ನೂ ಪ್ರೀತಿಯ ಅನ್ಯೋನ್ಯತೆಯನ್ನೂ ಹುಟ್ಟಿಸಿತು.

3. **ಅಭಿಷೇಕವು ಸಾಕ್ಷಿಗಳನ್ನಾಗಿ ಮಾಡಿತು**:– ಕರ್ತನ ವಾಗ್ದಾನಫಲವಾದ ಅಭಿಷೇಕದಿಂದ ಆತನ ಶಿಷ್ಯರು ಕ್ರಿಸ್ತನಿಗೆ

ನಾವು ಒಂದಾಗಿರುವ ಪ್ರಕಾರ, ಅವರು ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ (ಯೋಹಾ. 17:22).

ಧೈರ್ಯವಾಗಿ ಸಾಕ್ಷಿ ಹೇಳುವವರಾಗಿ ಮಾರ್ಪಟ್ಟರು. ಪೇತ್ರನು ಯೆರೂಸಲೇಮಿನಲ್ಲಿ ಪ್ರಸಂಗಿಸುತ್ತಾ "ಈ ಯೇಸುವನ್ನೇ ದೇವರು ಎಬ್ಬಿಸಿದನು ಇದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ ಎಂದು ಘಂಟಾಘೋಷವಾಗಿ ಪ್ರಸಂಗ ಮಾಡಿದನು. ಅದುವರೆಗೂ ಭಯದಿಂದಿದ್ದ ಪೇತ್ರನು, ದಾಸಿಯ ಮುಂದೆ ಕ್ರಿಸ್ತನನ್ನು ಅರಿಯೆನು ಎಂಬುದಾಗಿ ಹೇಳಿದವನು, ಈಗ ಯೆರೂಸಲೇಮಿನಲ್ಲಿ ಸಾಕ್ಷಿಯಾಗಿ ನಿಂತಿದ್ದಾನೆ. "ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ" ಎಂಬದಾಗಿ ಹೇಳಿದ ವಾಗ್ದಾನ ಅಂದು ನೆರವೇರಿತು.

ದೇವ ಮಗುವೇ ಕರ್ತನಿಗೆ ಸಾಕ್ಷಿ ಹೇಳಲು ನೀನು ಸಂಕೋಚ ಪಡಬಹುದು. ಒಳ್ಳೆಯ ಮಾತುಗಾರಿಕೆ ಇಲ್ಲವೆಂಬದಾಗಿ ಹೇಳಬಹುದು. ಆದರೆ ಪವಿತ್ರಾತ್ಮನ ಅಭಿಷೇಕ ಬರುವಾಗ ನೀನು ಕರ್ತನಿಗಾಗಿ ಒಬ್ಬ ಧೈರ್ಯಶಾಲಿಯಾದ ಸಾಕ್ಷಿಯಾಗಿ ಮಾರ್ಪಡುವಿ.

ಆಂಧ್ರ ದೇಶದಲ್ಲಿರುವ ಒಬ್ಬ ಬಡ ಹುಡುಗಿಯ ಬಗ್ಗೆ ನಾನು ಕೇಳಿದ್ದೇನೆ. ಅವಳು ಹಳ್ಳಿಯಲ್ಲಿನ ಬಡಹುಡುಗಿ. ಆದರೆ ಕರ್ತನು ಅವಳನ್ನು ಅಭಿಷೇಕಿಸಿದಾಗ ಎಲ್ಲರೂ ಆಶ್ಚರ್ಯಪಡುವಂತೆ ಸರಳವಾಗಿ ಆಂಗ್ಲಭಾಷೆಯಲ್ಲಿ ಮಾತನಾಡಲಾರಂಭಿಸಿದಳು. ಇಂದು ಅವಳು ಅಮೇರಿಕಾ ದೇಶದಲ್ಲಿ ಸೇವೆ ಸಲ್ಲಿಸುತ್ತಿದ್ದಾಳೆ. ಕರ್ತನು ಜ್ಞಾನ ವಿವೇಕಗಳನ್ನನುಗ್ರಹಿಸುತ್ತಾನೆ.

ಶಿಷ್ಯರೆಲ್ಲರೂ ಅವಿದ್ಯಾವಂತರೇ ಆಗಿದ್ದಾಗ್ಯೂ ಕರ್ತನು ಅವರಿಗೆ ವಾಗ್ದಾನ ಮಾಡಿದನು ಏನು ಉತ್ತರ ಕೊಡಬೇಕೆಂದು ಯೋಚಿಸಬೇಡಿರಿ. ನಿಮ್ಮ ವಿರೋಧಿಗಳೆಲ್ಲರ ಎದುರು ನಿಲ್ಲುವದಕ್ಕೂ, ಎದುರು ಮಾತನಾಡುವದಕ್ಕೂ ಆಗದಂತಾ ಬಾಯನ್ನೂ ಬುದ್ಧಿಯನ್ನು ನಾನೇ ನಿಮಗೆ ಕೊಡುವೆನು. ನಿಮ್ಮೊಳಗಿರುವ ಆತ್ಮನೇ ನಿಮ್ಮ ಮೂಲಕ ಮಾತಾಡುವನು. ಅಭಿಷೇಕಿಸಲ್ಪಟ್ಟ ಪೇತ್ರನು ಮಾಡಿದ ಪ್ರಸಂಗಗಳು ಸಾವಿರಾರು ಆತ್ಮಗಳನ್ನು ರಕ್ಷಿಸಿತು. ಅಭಿಷೇಕಕ್ಕೆ ಮೊದಲು ಹಿಂಜರಿದು ಬಿದ್ದುಹೋದ ಪೇತ್ರನು, ಅಭಿಷೇಕದ ನಂತರ ಜಯದ ಜೀವಿತವನ್ನು, ಸಾಕ್ಷಿಯ ಜೀವಿತವನ್ನು ಜೀವಿಸಿದ್ದನ್ನು ನಾವು ಕಾಣುತ್ತೇವೆ. ನೀವೇ ನನ್ನ ಸಾಕ್ಷಿಗಳು ಎಂಬ ಕರ್ತನ ಮಾತು ಅಭಿಷೇಕದ ಮೂಲಕ ನೆರವೇರಿತು.

**1. ಅಭಿಷೇಕದ ಮೂಲಕ ಬಲ :–** ಅಭಿಷೇಕದ ಮೂಲಕ ಉನ್ನತ ಬಲವು ಮನುಷ್ಯರ ಮೇಲೆ ಎರಗುವಂಥದ್ದಾಗಿದೆ. ಅದು ಆತ್ಮ ಪ್ರಾಣ ಶರೀರವನ್ನು ಬಲಪಡಿಸುವಂತದ್ದು.

ದೇವರ ಮಕ್ಕಳಿಗೆ ಬಲವು ಅಗತ್ಯ. ಸೈತಾನನ್ನು ಎದುರಿಸಿ ನಿಲ್ಲಲು ಬಲಬೇಕು, ವ್ಯಾಧಿ, ಉಪದ್ರವಗಳನ್ನು ಎದುರಿಸಿ ನಿಲ್ಲಲು ಬಲಬೇಕು. ಮಾಂತ್ರಿಕರನ್ನು, ಮಂತ್ರ ಮಾಟಗಳನ್ನು ಎದುರಿಸಲು ಬಲಬೇಕು. ಅದು ಮಾತ್ರವೇ ಅಲ್ಲ, ಜಯದ ಜೀವಿತ ನಡಿಸಲು ಬಲಬೇಕು. ಈ ಬಲವನ್ನು ಪವಿತ್ರಾತ್ಮನ ಅಭಿಷೇಕದಿಂದ ಮಾತ್ರವೇ ಹೊಂದಲು ಸಾಧ್ಯ.

ಕರ್ತನು ಈ ಬಲವನ್ನು ಶಿಷ್ಯರಿಗೆ ವಾಗ್ದಾನ ಮಾಡಿದನು. "ಇಗೋ, ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು" (ಲೂಕ. 24:49).

ಈ ಕಾದಿರುವಿಕೆಯು ಪಾಪಕ್ಷಮೆಗಾಗಿಯಾಗಲೀ, ರಕ್ಷಣೆಗಾಗಿಯಾಗಲೀ ಅಲ್ಲ; ಇದು ಅವರನ್ನು ಬಲಪಡಿಸುವ ಪವಿತ್ರಾತ್ಮನ ಬಲಕ್ಕಾಗಿಯೇ ಕಾದಿರಬೇಕಾಗಿದ್ದಿತು. "ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ" ಎಂಬದು ಆತನು ಮಾಡಿದ ವಾಗ್ದಾನ. ಈಗಾಗಲೇ ಆತನ ಶಿಷ್ಯರಿಗೆ ವ್ಯಾಧಿಗಳ ಮೇಲೂ, ಅಶುದ್ಧಾತ್ಮಗಳ ಮೇಲೂ ಅಧಿಕಾರವು ಮಹಿಮೆಯು ಕೊಡಲ್ಪಟ್ಟಿದ್ದಿತು (ಲೂಕ. 10:19). ಆದರೆ ಪವಿತ್ರಾತ್ಮನು ಇನ್ನೂ ಹೆಚ್ಚಾದ ಬಲವನ್ನೂ ಕೊಡುವದರಿಂದ ಶತ್ರುವಿನ ಮೇಲೆ ಪೂರ್ಣ ಜಯವನ್ನು ಹೊಂದಬಹುದು. ನನಗೆ ಮದ್ರಾಸ್ ಪಟ್ಟಣದಲ್ಲಿರುವ ಬ್ಯಾಪ್ಟಿಸ್ಟ್ ಸಭೆಯ ಬೋಧಕರ ಪರಿಚಯವಿದೆ. ರಕ್ಷಣೆಯ ಬಗ್ಗೆ ಅವರಿಗೆ ಗಾಢವಾದ ವಿಶ್ವಾಸ ನಂಬಿಕೆಗಳಿದ್ದವು. ಆದರೆ ಪವಿತ್ರಾತ್ಮನ ಅಭಿಷೇಕವನ್ನು ನಂಬುತ್ತಿರಲಿಲ್ಲ ಅಪಹಾಸ್ಯ ಮಾಡುತ್ತಿದ್ದರು. ಆತನು ತನಗಿದ್ದಂಥ ರಕ್ಷಣೆಯ ಮಹಿಮೆಯ ಬಲದಿಂದಲೇ ದೆವ್ವಗಳನ್ನು ಓಡಿಸುತ್ತಿದ್ದರು. ಅವರು ಪ್ರಾರ್ಥಿಸಿದರೆ ವ್ಯಾಧಿಗಳು ನೀಗಿ ಸೌಖ್ಯವಾಗುತ್ತಿತ್ತು. ಆದ್ದರಿಂದ ಅವರು, ನಾನು ದೆವ್ವಗಳನ್ನು ಬಿಡಿಸುತ್ತೇನೆ. ನನಗೆ ಪವಿತ್ರಾತ್ಮನ ಅಭಿಷೇಕ ಬೇಕಿಲ್ಲ ಎನ್ನುತ್ತಿದ್ದರು. ಒಂದು ದಿನ ಅವರು ಒಂದು ಭಯಂಕರವಾದ ದೆವ್ವವನ್ನು ಬಿಡಿಸಲು ಹೋದರು. ಅದು ಹೋಗಲಿಲ್ಲ. ಗದರಿಸಿ ಓಡಿಸಿದಾಗ್ಯೂ ಅದು ಜಗ್ಗಲಿಲ್ಲ. ತಲೆ ಕೂದಲನ್ನು ಹಿಡಿದು ಗದರಿಸಿ ಬಿಟ್ಟು ಹೋಗುವಂತೆ ಅಪ್ಪಣೆ ಮಾಡಿದಾಗ್ಯೂ ಅದು ಆಗಲಿಲ್ಲ. ಕೊನೆಗೆ ಆ ದೆವ್ವ ಅವರನ್ನು ನೋಡಿ, "ನೀನು ಸಾಮಾನ್ಯವಾದ ದೆವ್ವಗಳನ್ನು ಮೊದಲು ಓಡಿಸಿರಬಹುದು, ನನ್ನನ್ನು ಓಡಿಸಬೇಕಾದರೆ ನೀನು ಹೋಗಿ ಅಭಿಷೇಕ ಹೊಂದಿ ಬರಬೇಕು" ಎಂದು ಹೇಳಿತಂತೆ. ಅದರ ನಂತರವೇ ಅವರು ಪವಿತ್ರಾತ್ಮನ ಅಭಿಷೇಕವನ್ನು ನಂಬಿದರು. ಆ ಆತ್ಮನಿಗಾಗಿ ಅಪೇಕ್ಷಿಸಿ, ತನ್ನನ್ನು ತಗ್ಗಿಸಿ ಕರ್ತನ ಬಳಿ ದೀನತೆಯಿಂದ ಬೇಡಿದಾಗ ಕರ್ತನು ಅವರನ್ನು ಅಭಿಷೇಕಿಸಿದನು. ಅದರ ನಂತರ ಆ ದೆವ್ವವನ್ನು ಬಿಡಿಸಲು ಹೋದರು. ಕೂಡಲೇ ಅದು ಹೇಳಿತು "ನೀನು ಈಗ ಅಭಿಷೇಕವನ್ನು ಹೊಂದಿದ್ದೀ ನಿನ್ನನ್ನು ಎದುರಿಸಲು ನನಗೆ ಬಲವಿಲ್ಲ" ಎಂದು ಹೇಳಿ ಓಡಿ ಹೋಯಿತಂತೆ. (ಈ ಸಾಕ್ಷಿಯನ್ನು ಆ ಬೋಧಕರು ಸ್ವತ: ನನಗೆ ಹೇಳಿದರು).

ಮುಂದುವರಿಯುವದು......

*ಸಂಗ್ರಹ.*

ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು (ವಿಮೋ. 40:34).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) 2 ಕೊರಿ. 11:2–3 ದೇವರ ಮಕ್ಕಳು ದೇವರ ಮೇಲೆ ಇಟ್ಟಿರುವ ಯಥಾರ್ಥತ್ವ ಮತ್ತು ಪಾತಿವ್ರತ್ಯವನ್ನು ಕೆಡಿಸುವುದಕ್ಕಾಗಿ ಸೈತಾನನು ಶೋಧನೆ ತರುತ್ತಾನೆ. ಸೈತಾನನು ದೇವರ ಮಕ್ಕಳ ಜೀವಿತದಲ್ಲಿ ಶೋಧನೆ ತರುವುದಕ್ಕೆ ಕೆಲವು ಕಾರಣಗಳಿವೆ. ಅವನು ಶೋಧನೆ ತರುವುದು ಮಾತ್ರವಲ್ಲ, ಶೋಧನೆಯಲ್ಲಿ ದೇವರ ಮಕ್ಕಳು ಬಿದ್ದು ದೇವರ ಪ್ರೀತಿಯಿಂದ ಅಗಲಬೇಕು ಎಂಬಂತಹ ಉದ್ದೇಶವನ್ನ ಇಟ್ಟುಕೊಂಡಿದ್ದಾನೆ. ಮೇಲಿನ ವಾಕ್ಯದಲ್ಲಿ ಸೈತಾನನು ಶೋಧನೆ ತರುವ 2 ಕಾರಣಗಳನ್ನು ಕೊಡಲಾಗಿದೆ.

1) ದೇವರ ಮಕ್ಕಳು ದೇವರ ಮೇಲೆ ಇಟ್ಟಿರುವ ಯಥಾರ್ಥತ್ವವನ್ನು ಕೆಡಿಸಲು ಶೋಧನೆ ತರುತ್ತಾನೆ.

2) ದೇವರ ಮಕ್ಕಳ ಮತ್ತು ದೇವರಲ್ಲಿರುವ ಪಾತಿವ್ರತ್ಯವನ್ನು ಕೆಡಿಸುವುದಕ್ಕಾಗಿ ಶೋಧನೆ ತರುತ್ತಾನೆ.

1) **ದೇವರ ಮಕ್ಕಳು ದೇವರಲ್ಲಿಯಿಟ್ಟಿರುವ ಯಥಾರ್ಥತ್ವವನ್ನು ಕೆಡಿಸಲು ಶೋಧನೆ ತರುತ್ತಾನೆ** :– ಯಥಾರ್ಥತ್ವ ಅಂದರೇನು ? ಮೊದಲು ನಾವು ತಿಳಿದುಕೊಳ್ಳಬೇಕು ಯಥಾರ್ಥತ್ವ ಅಂದರೆ, ವಂಚನೆಯಿಲ್ಲದ, ಪ್ರಾಮಾಣಿಕತೆಯುಳ್ಳ, ನಿಷ್ಕಪಟತೆ ಎಂಬ ಅರ್ಥಗಳಿವೆ. ದೇವರು ತನ್ನ ಮಕ್ಕಳಲ್ಲಿ ಯಥಾರ್ಥತೆಯನ್ನು ಬಯಸುವವನಾಗಿದ್ದಾನೆ. ಅಂದು ಫಿಲಿಪ್ಪನು ನತಾನಿಯೇಲನನ್ನು ಕಂಡು ಕರ್ತನಾದ ಯೇಸುವಿನ ಬಳಿಗೆ ಕರೆದುಕೊಂಡು ಬಂದನು (ಯೋಹಾ. 1:45). "ತನ್ನ ಕಡೆಗೆ ಬರುವ ನತಾನಿಯೇಲನನ್ನು ಕಂಡು ಅವನ ವಿಷಯವಾಗಿ ಇಗೋ ಇವನು ನಿಜವಾದ ಇಸ್ರಾಯೇಲನು; ಇವನಲ್ಲಿ ಕಪಟವಿಲ್ಲ ಅಂದನು" (ಯೋಹಾ. 1:47). ಕರ್ತನಾದ ಯೇಸುಕ್ರಿಸ್ತನು ನತಾನಿಯೇಲನನ್ನು ನೋಡಿದ ಕೂಡಲೆ ಆತನ ಸ್ವಭಾವವನ್ನು ಕಂಡು ಹಿಡಿದನು.

"ಸಹೋದರರೇ, ನಾವು ಸುಮ್ಮ ಸುಮ್ಮಗೆ ನಿಮ್ಮಲ್ಲಿಗೆ ಬರಲಿಲ್ಲವೆಂಬುದನ್ನೂ ನಿಮಗೆ ತಿಳಿದಿರುವ ಪ್ರಕಾರ ನಮಗೆ ಫಿಲಿಪ್ಪಿ ಪಟ್ಟಣದಲ್ಲಿ ಹಿಂಸೆಯೂ ಅವಮಾನವೂ ಮೊದಲು ಸಂಭವಿಸಿದರೂ ನಾವು ನಮ್ಮ ದೇವರ ಮೂಲಕ ಧೈರ್ಯಗೊಂಡು ಬಹು ವಿರೋಧವನ್ನು ಅನುಭವಿಸುವವರಾಗಿ ನಿಮಗೆ ದೇವರ ಸುವಾರ್ತೆಯನ್ನು ತಿಳಿಸಿದೆವೆಂಬುದನ್ನೂ ನೀವೇ ಬಲ್ಲಿರಿ. ಯಾಕಂದರೆ ನಮ್ಮ ಬೋಧನೆಯು ಅಬದ್ಧವಲ್ಲ, ಅಶುದ್ಧವಲ್ಲ, ಮೋಸವಲ್ಲ; ದೇವರು ನಮ್ಮನ್ನು ಯೋಗ್ಯರೆಂದೆಣಿಸಿ ಸುವಾರ್ತೆಯನ್ನು ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತಾಡುತ್ತೇವೆ. ನಿಮಗೆ ತಿಳಿದಿರುವ ಪ್ರಕಾರ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಾಣಬಂದಿಲ್ಲ, ಮತ್ತು ದ್ರವ್ಯಾಶೆಯನ್ನು ಮರೆಮಾಡುವುದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ; ಇದಕ್ಕೆ ದೇವರೇ ಸಾಕ್ಷಿ. ಇದಲ್ಲದೆ ನಾವು ಕ್ರಿಸ್ತನ ಅಪೋಸ್ತಲರಾಗಿರುವುದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ. ತಾಯಿಯು ತನ್ನ ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡೆದುಕೊಂಡಿದ್ದೆವು. ನೀವು ನಮಗೆ ಅತೀ ಪ್ರಿಯರಾದ ಕಾರಣ ನಾವು ನಿಮ್ಮಲ್ಲಿ ಮಮತೆಯುಳ್ಳವರಾಗಿ ದೇವರ ಸುವಾರ್ತೆಯನ್ನು ಹೇಳುವುದಕ್ಕೆ ಮಾತ್ರವಲ್ಲದೆ ನಿಮಗೋಸ್ಕರ ಪ್ರಾಣವನ್ನು ಕೊಡುವುದಕ್ಕೆ ಸಂತೋಷಿಸುವವರಾದೆವು. ಸಹೋದರರೇ, ನಾವು ನಿಮ್ಮಲ್ಲಿ ಯಾರ ಮೇಲೆಯೂ ಭಾರ ಹಾಕಬಾರದೆಂದು ಹಗಲಿರುಳು ದುಡಿದು ಜೀವನ ಮಾಡಿಕೊಳ್ಳುತ್ತಾ ದೇವರ ಸುವಾರ್ತೆಯನ್ನು ನಿಮಗೆ ಸಾರಿದೆವು; ಆ ನಮ್ಮ ಕಷ್ಟವೂ ಪ್ರಯಾಸವೂ ನಿಮ್ಮ ನೆನಪಿನಲ್ಲಿರುವದಷ್ಟೆ. ನಂಬುವವರಾದ ನಿಮ್ಮ ವಿಷಯದಲ್ಲಿ ನಾವು ಎಷ್ಟೋ ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಂಡೆವೆಂಬುದಕ್ಕೆ ನೀವು ಸಾಕ್ಷಿಗಳು, ದೇವರೂ ಸಾಕ್ಷಿ. ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಬುದ್ಧಿ ಹೇಳುತ್ತಾ ಧೈರ್ಯಪಡಿಸುತ್ತಾ ತನ್ನ ರಾಜ್ಯ ಪ್ರಭಾವಗಳಲ್ಲಿ ಪಾಲುಗಾರರಾಗುವುದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೆಯಬೇಕೆಂದು ಖಂಡಿತವಾಗಿ ಹೇಳುತ್ತಾ ಇದ್ದೆವೆಂಬುದು ನಿಮಗೆ ತಿಳಿದದೆ" (1 ಥೆಸ. 2:1–12). ಮೇಲಿನ ವಚನಗಳಲ್ಲಿ ಪೌಲನು ಥೆಸಲೋನಿಕ ಸಭೆಯವರಲ್ಲಿರುವ ತನ್ನ ಯಥಾರ್ಥತ್ವದ ಕುರಿತಾಗಿ ಸಾಕ್ಷಿ ಹೇಳುತ್ತಿದ್ದಾನೆ.

ಮನುಷ್ಯನ ಆತ್ಮವು ಯೆಹೋವನ ದೀಪವಾಗಿದೆ. ಅದು ಅಂತರಂಗವನ್ನೆಲ್ಲಾ ಶೋಧಿಸುತ್ತದೆ (ಜ್ಞಾನೋ. 20:27).

ಥೆಸಲೋನಿಕದವರಲ್ಲಿ ಪೌಲನ ಯಥಾರ್ಥತೆಯ **ಉದಾಹರಣೆಗಳು :–**

1) ಹಿಂಸೆಯ ಮಧ್ಯದಲ್ಲಿ ಪೌಲ ಸುವಾರ್ತೆ ಸಾರಿದನು (1 ಥೆಸ. 2:1–2).
2) ಪೌಲನ ಬೋಧನೆಯು ಮೋಸವೂ, ಅಶುದ್ಧವೂ ಅಲ್ಲ, ಅದು ನಿಜವಾದದ್ದು, ಉದ್ದೇಶವುಳ್ಳದ್ದು ಎಂದು ಸಾಕ್ಷಿ ಕೊಡುತ್ತಿದ್ದಾನೆ.
3) ಮನುಷ್ಯರನ್ನು ಮೆಚ್ಚಿಸುತ್ತಾ ಇಲ್ಲ, ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸುತ್ತಾನೆಂದು ಸಾಕ್ಷಿ ಕೊಡುತ್ತಿದ್ದಾನೆ (1 ಥೆಸ. 2:4).
4) ಮುಖಸ್ತುತಿ ಮಾಡಲಿಲ್ಲ (1 ಥೆಸ. 2:5).
5) ದ್ರವ್ಯಾಶೆ ಮರೆಮಾಡಿ ವೇಷ ಹಾಕಲಿಲ್ಲ (1 ಥೆಸ. 2:5).
6) ಮನುಷ್ಯರ ಮಾನವನ್ನು ಬಯಸಲಿಲ್ಲ (1 ಥೆಸ. 2:6).
7) ಯಥಾರ್ಥವಾದ ಪ್ರೀತಿಯನ್ನು (ತನ್ನ ಪ್ರೀತಿ ತಾಯಿಯ ಪ್ರೀತಿಗೆ ಹೋಲಿಸುತ್ತಿದ್ದಾನೆ) ಮಾಡಿದನು (1 ಥೆಸ. 2:7).
8) ಪ್ರಾಣ ಕೊಡಲು ಸಿದ್ಧನಾಗಿದ್ದನು (1 ಥೆಸ. 2:8).
9) ಕಷ್ಟಪಟ್ಟು ಕೆಲಸ ಮಾಡಿ ಸೇವೆ ಮಾಡಿದನು (1ಥೆಸ. 2:10).
10) ಥೆಸಲೋನಿಕದವರ ಮಧ್ಯದಲ್ಲಿ ಶುದ್ಧರಾಗಿ, ನೀತಿವಂತರಾಗಿ, ನಿರ್ದೋಷಿಗಳಾಗಿ ನಡಕೊಂಡನು (1 ಥೆಸ. 2:10).
11) ತಂದೆ ತನ್ನ ಮಕ್ಕಳಿಗೆ ಬುದ್ಧಿ ಹೇಳಿದ ಹಾಗೆ ಬುದ್ಧಿ ಹೇಳಿದನು (1 ಥೆಸ. 2:11).
12) ತನ್ನ ರಾಜ್ಯ ಪ್ರಭಾಗಳಲ್ಲಿ ಪಾಲುಗಾರರಾಗುವುದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನಡೆಯಲು ಹೇಳಿದನು (1 ಥೆಸ. 2:12).

ಮೇಲಿನ 12 ಸಂಗತಿಗಳು ಪೌಲನ ಯಥಾರ್ಥತ್ವಕ್ಕೆ ಸಾಕ್ಷಿಯಾಗಿದೆ. ಅದೇ ರೀತಿಯಾಗಿ ಕರ್ತನಲ್ಲಿ ನಾವು ಇಟ್ಟಿರುವ ಯಥಾರ್ಥವಾದ ನಂಬಿಕೆ, ಪ್ರೀತಿ, ವಿಶ್ವಾಸ, ನಿರೀಕ್ಷೆ ಇವುಗಳನ್ನು ಸೈತಾನನು ಕೆಡಿಸಲು ಕೆಲವೊಂದು ಶೋಧನೆಗಳನ್ನು ನಮ್ಮ ಜೀವಿತದಲ್ಲಿ ತರುತ್ತಾನೆ. ನಾವು ಎಚ್ಚರಿಕೆಯಿಂದ ಇರದಿದ್ದರೆ ಸೈತಾನನು ಹಾಸಿದ ಬಲೆಯಲ್ಲಿ ಬೀಳುತ್ತೇವೆ. ಏದೇನ್ ತೋಟದಲ್ಲಿ ಸೈತಾನನು ಹವ್ವಳನ್ನು ನೋಡಿ ಆದಿ. 3:1 ರಲ್ಲಿ ಯಹೋವ ದೇವರು ಉಂಟು ಮಾಡಿದ ಎಲ್ಲಾ ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳದ್ದಾಗಿತ್ತು. ಅದು ಸ್ತ್ರೀಯ ಬಳಿಗೆ ಬಂದು ಏನವ್ವಾ ತೋಟದಲ್ಲಿರುವ ಯಾವ ಮರದ ಹಣ್ಣನ್ನು ನೀವು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವುದು ನಿಜವೋ ಎಂದು ಕೇಳಲು ಸೈತಾನನು ಪ್ರೀತಿಯಿಂದ ಹವ್ವಳ ಬಳಿ ಸ್ನೇಹಿತನಂತೆ ನಟಿಸಿ ಬರುತ್ತಿದ್ದಾನೆ ಅದಕ್ಕೆ ಹವ್ವಳ ಉತ್ತರ ಆದಿ. 3:2–3 ಸ್ತ್ರೀಯು ತೋಟದಲ್ಲಿರುವ ಮರದ ಹಣ್ಣುಗಳನ್ನು ನಾವು ತಿನ್ನಬಹುದು ಆದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯವಾಗಿ ಇದನ್ನು ತಿನ್ನಲೂ ಕೂಡದು, ಮುಟ್ಟಲೂ ಕೂಡದು ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ ಅಂದಳು.

ಈ ಅಂತಿಮ ದಿನಗಳಲ್ಲಿ ಅನೇಕ ಕ್ರೈಸ್ತ ವಿಶ್ವಾಸಿಗಳು ಮಾಡುವಂತಹ ತಪ್ಪು ಇದು ಹವ್ವಳು ಸರ್ಪದೊಟ್ಟಿಗೆ ಮಾತನಾಡಲು ನಿಂತದ್ದೆ ದೊಡ್ಡ ತಪ್ಪು. ಇಂದು ಅನೇಕ ಕ್ರೈಸ್ತ ವಿಶ್ವಾಸಿಗಳು ಸತ್ಯವೇದದ ವಾಕ್ಯಗಳ ಕುರಿತು ದುರ್ಬೋದಕರ ಬಳಿಯಲ್ಲಿ ವಾದ ಮಾಡಲು ನಿಲ್ಲುತ್ತಾರೆ. ಇದರಿಂದಾಗಿ ದುರ್ಬೋದಕರು ವಿಶ್ವಾಸಿಗಳ ಮನಸ್ಸಿನಲ್ಲಿ ಕೆಲವೊಂದು ನಂಬಿಕೆಯ ವಿಚಾರದಲ್ಲಿ, ತ್ರಯೇಕತ್ವದ ವಿಚಾರದಲ್ಲಿ, ಅದ್ಭುತಗಳ ವಿಚಾರದಲ್ಲಿ, ಪರಿಶುದ್ಧಾತ್ಮನ ವಿಚಾರದಲ್ಲಿ, ರೋಗ ಶಾಂತಿಯ ವಿಚಾರದಲ್ಲಿ, ಪರಿಶುದ್ಧತೆಯ ವಿಚಾರದಲ್ಲಿ ಕೆಲವೊಂದು ಸಂಶಯದ ಬೀಜಗಳನ್ನು ಹಾಕಿ ಕ್ರೈಸ್ತ ವಿಶ್ವಾಸಿಗಳ ಮನಸ್ಸನ್ನು ಗಲಿಬಿಲಿಗೆ ಒಳಪಡಿಸುತ್ತಾನೆ. ಇದರಿಂದಾಗಿ ಅನೇಕ ವಿಶ್ವಾಸಿಗಳು ಕ್ರಿಸ್ತನಲ್ಲಿರಬೇಕಾದ ಯಥಾರ್ಥತ್ವವನ್ನು ಕಳಕೊಂಡು ಬಿಡುತ್ತಾರೆ.

ಕರ್ತನಾದ ಯೇಸುವಿನ ಕುರಿತು ಅಂದು ಸಾಕ್ಷಿ ಹೇಳಿದ ಸ್ನಾನಿಕ ಯೋಹಾನನ ಕುರಿತು ನಾವು ತಿಳುಕೊಳ್ಳುವುದಾದರೆ "ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು. ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನು ಮಾಡಿ ತನ್ನ ಗೋಧಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟು ಬಿಡುವನು ಎಂದು ಹೇಳಿದನು" (ಮತ್ತಾ. 3:11–12).

ಮುಂದುವರಿಯುವದು......

**ಪಾ॥ ಸುನಿಲ್ ಜಾನ್ ಡಿ'ಸೋಜಾ**

ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿ ಬಿಟ್ಟನು
(1 ತಿಮೊ. 2:6).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: 0091-820 2589070, 0091-820 200 2781
E-mial: dgmofficial@gmail.com

ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ.
ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ (1 ತಿಮೊ. 2:5).

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

4) **ಆತ್ಮಭಾರ ಇಲ್ಲದಿರುವ ಜೀವಿತ** :– ನಾವು ರಕ್ಷಣೆ ಹೊಂದಿದ ಮೇಲೆ ಲೋಕದ ಜನರ ರಕ್ಷಣೆಗಾಗಿ ನಮ್ಮಲ್ಲಿ ಆತ್ಮಭಾರ ಇರಬೇಕು. ಒಂದು ವೇಳೆ ಕ್ರೈಸ್ತ ವಿಶ್ವಾಸಿಗಳು ಮಾತನಾಡದಿದ್ದರೆ ಲೋಕವು ನಾಶವಾಗುವಂತದ್ದಾಗಿದೆ. ಒಂದು ವೇಳೆ ನಮ್ಮಲ್ಲಿ ಆತ್ಮಭಾರ ಇಲ್ಲದೇ ಹೋದರೆ ಕೇವಲ ಹೆಸರಿನ ಕ್ರೈಸ್ತ ವಿಶ್ವಾಸಿಗಳಾಗಿ ಮಾತ್ರ ಬದಲಾಗುತ್ತೇವೆ. ಭಾನುವಾರ ಬಂದಾಗ (ವಿದೇಶದಲ್ಲಿ ಶುಕ್ರವಾರ) ಆರಾಧನೆಗೆ ಹೋಗುವುದು ಆರಾಧನೆಯಾದ ಕೂಡಲೆ ನೆಟ್ಟಗೆ ಮನೆಗೆ ಬರುವುದು. ಇಡೀವಾರ ನಮ್ಮ ಲೋಕದಲ್ಲೇ ಜೀವಿಸುವುದು ಇದು ನಮ್ಮ ನಂಬಿಕೆಯ ಜೀವಿತಕ್ಕೆ ನಮಗೆ ಗೊತ್ತಿಲ್ಲದೆ ಹಿಂಜಾರುವಿಕೆಯನ್ನು ತರುವಂತದ್ದಾಗಿದೆ.

## ಮಹಿಳೆಯರ ಸ್ವರ

"ಯೆಹೋವನಿಗೆ ಜ್ಞಾಪಿಸುವವರೇ, ಆತನು ಯೆರೂಸಲೇಮನ್ನು ಭದ್ರಪಡಿಸಿ ಲೋಕ ಪ್ರಸಿದ್ಧಿಗೆ ತರುವ ತನಕ ನಿಮಗೆ ವಿರಾಮವಿಲ್ಲದಿರಲಿ, ಆತನಿಗೂ ವಿರಾಮಕೊಡದಿರಿ" (ಯೆಶಾ. 62:7).

"ನನ್ನ ಜನರಿಗೆ ಕೇಡು ಸಂಭವಿಸುವುದನ್ನು ನೋಡಿ ನಾನು ಸಹಿಸುವುದು ಹೇಗೆ? ನನ್ನ ಕುಲ ನಾಶನವನ್ನು ನೋಡುತ್ತಾ ಸುಮ್ಮನಿರುವುದು ಹೇಗೆ ಎಂದು ಭಿನ್ನವಿಸಿದಳು" (ಎಸ್ತೆ. 8:6). "ಆದರೂ ನೀನು ಕರುಣೆಯಿಟ್ಟು ಅವರ ಪಾಪವನ್ನು ಕ್ಷಮಿಸಬೇಕು. ಇಲ್ಲವಾದರೆ ನೀನು ಬರೆದಿರುವ [ಜೀವಿತರ] ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿ ಬಿಡಬೇಕೆಂದು ಕೇಳಿಕೊಳ್ಳುತ್ತೇನೆ ಎಂದು ಪ್ರಾರ್ಥಿಸಿದನು" (ವಿಮೋ. 32:32). "ಅಯ್ಯೋ, ನನ್ನ ಶಿರಸ್ಸು ಜಲಮಯವಾಗಿಯೂ ನನ್ನ ನೇತ್ರಗಳು ಕಣ್ಣೀರಿನ ಬುಗ್ಗೆಯಾಗಿಯೂ ಇದ್ದರೆ ಎಷ್ಟೋ ಲೇಸು! ನನ್ನ ಜನರಲ್ಲಿ ಹತರಾದವರ ನಿಮಿತ್ತ ಹಗಲಿರುಳೂ ಅಳಬೇಕಲ್ಲಾ!" (ಯೆರೆ. 9:1). "ನನ್ನ ಆತ್ಮವು ಗುಟ್ಟಾದ ಸ್ಥಳದಲ್ಲಿ ನಿಮ್ಮ ಗರ್ವದ ನಿಮಿತ್ತ ಗೋಳಾಡುವುದು; ಯೆಹೋವನ ಮುಂದೆಯು ಸೆರೆಯಾಗಿ ಹೋದದರಿಂದ ಬಹಳವಾಗಿ ಅಳುವೆನು, ನನ್ನ ನೇತ್ರವು ಅಶ್ರುಧಾರೆಯನ್ನು ಸುರಿಸುವದು" (ಯೆರೆ. 13:17). "ನೀನು ಈ ಮಾತನ್ನು ಅವರಿಗೆ ಹೇಳು ನನ್ನ ಕಣ್ಣೀರು ರಾತ್ರಿ ಹಗಲೂ ನಿರಂತರ ಸುರಿಯಲಿ; ಏಕಂದರೆ ನನ್ನ ಜನವೆಂಬ ಯುವತಿಗೆ ದೊಡ್ಡ ಗಾಯವಾಯಿತು, ಹೌದು ಗಡುಸಾದ ಪೆಟ್ಟು ಬಿತ್ತು" (ಯೆರೆ. 14:17). "ನನಗೆ ಮಹಾ ದು:ಖವೂ ನನ್ನ ಹೃದಯದಲ್ಲಿ ಎಡೆಬಿಡದೆ ವೇದನೆಯೂ ಉಂಟು. ಈ ಮಾತನ್ನು ಸುಳ್ಳಾಡದೆ ಕ್ರಿಸ್ತನ ಮುಂದೆ ಸತ್ಯವಾಗಿ ಹೇಳುತ್ತೇನೆ; ಪವಿತ್ರಾತ್ಮಾಧೀನವಾಗಿರುವ ನನ್ನ ಮನಸ್ಸೇ ಸಾಕ್ಷಿ. ಶರೀರ ಸಂಬಂಧವಾಗಿ ಸ್ವಜನರಾಗಿರುವ ನನ್ನ ಸಹೋದರರಿಗೋಸ್ಕರ ನಾನೇ ಸಾಧ್ಯವಾದರೆ ಕ್ರಿಸ್ತನನ್ನು ಅಗಲಿ ಶಾಪಗ್ರಸ್ತನಾಗುವುದಕ್ಕೆ ಒಪ್ಪಿಕೊಂಡೇನು" (ರೋಮ. 9:1–3). "ಸಹೋದರರೇ, ಇಸ್ರಾಯೇಲ್ಯರು ರಕ್ಷಣೆ ಹೊಂದ ಬೇಕೆಂಬುದೇ ನನ್ನ ಮನೋಭಿಲಾಷೆಯೂ ದೇವರಿಗೆ ನಾನು ಮಾಡುವ ವಿಜ್ಞಾಪನೆಯೂ ಆಗಿದೆ" (ರೋಮ. 10:1). ಸತ್ಯವೇದವನ್ನು ಓದುವಾಗ ಆತನ ಭಕ್ತರು ಲೋಕದ ಜನರ ರಕ್ಷಣೆಗಾಗಿ ಆತ್ಮಭಾರವುಳ್ಳವರಾಗಿ ಪೌಳಿಯ ಒಡಕಿನಲ್ಲಿ ನಿಂತು ಕರ್ತನಿಗೆ ಮೊರೆಯಿಟ್ಟರು. ಕೆಲವರು ತಮ್ಮ ಸ್ವಂಥ ಜನರಿಗಾಗಿ ಇನ್ನು ಕೆಲವರು ಲೋಕದ ಜನರಿಗಾಗಿ ಕರ್ತನ ಬಳಿ ಭಾರದಿಂದ ಪ್ರಾರ್ಥಿಸಿದರು.

5) **ಶರೀರದ ಅಭಿಲಾಷೆಗಳಿಂದ ತುಂಬಲ್ಪಟ್ಟ ಜೀವಿತ:** ಗಲಾತ್ಯ ಸಭೆಯವರು ರಕ್ಷಣೆಗೆ ಬಂದ ಆರಂಭದಲ್ಲಿ ಆತ್ಮದಲ್ಲಿ ತುಂಬಲ್ಪಟ್ಟವರಾಗಿದ್ದರು. ಕಾಲಕ್ರಮೇಣ ಆತ್ಮೀಕ ಬಿಸಿಯನ್ನು ಕಳಕೊಂಡರು. ಗಲಾ. 3:3 ರಲ್ಲಿ ಪೌಲನು ದು:ಖದಿಂದ ಆತ್ಮದಲ್ಲಿ ಆರಂಭಿಸಿದ್ದನ್ನು ಶರೀರ ಸಂಬಂಧವಾಗಿ ಸಿದ್ಧಿಗೆ ತರಬೇಕೆಂದಿದ್ದೀರಾ ಎಂಬ ಮಾತನ್ನು ಗಲಾತ್ಯ ಸಭೆಯವರಿಗೆ ಹೇಳುವುದನ್ನು ಕಾಣಬಹುದು. ನಿಮ್ಮ ಆತ್ಮದ ಮೇಲೆ ಯುದ್ಧ ಮಾಡುವ ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರು ಎಂದು ಪೇತ್ರನು ಎಚ್ಚರಿಸುತ್ತಿದ್ದಾನೆ (1 ಪೇತ್ರ. 2:11). ಅನೇಕ ಆಕರ್ಷಣೆ ಎಂಬ ಶೋಧನಗೆ ಒಳಗಾಗಿ, ಮೋಹ, ಕಾಮ, ಇಚ್ಛೆ, ಎಂಬ ಪಾಪಗಳಿಗೆ ಒಳಗಾಗಿ ವ್ಯಭಿಚಾರ ಪಾಪದಲ್ಲಿ ಬಿದ್ದು ಕೊನೆಗೆ ಅಳುವಂಥ ಪರಿಸ್ಥಿತಿ ಬಂದು ಬಿಡುತ್ತದೆ.

6) **ದೇವರೊಂದಿಗೆ ನಡೆಯದೆ ಲೋಕದ ಜನರೊಂದಿಗೆ ನಡೆಯುವ ಜೀವಿತ** : ಒಬ್ಬ ಸೇವಕರು ನಿನ್ನ ಸ್ನೇಹಿತ ಯಾರೆಂದು ಹೇಳು, ನೀನು ಯಾರೆಂದು ಹೇಳುವೆನು ಎಂಬುದಾಗಿ ಹೇಳಿದರು. "ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ

ನನ್ನ ಪಾದ ಸನ್ನಿಧಿಯ ಮಂದಿರವನ್ನು ವೈಭವಪಡಿಸುವೆನು
(ಯೆಶಾ. 60:13).

ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು" (ಕೀರ್ತ. 1:1–2).

7) **ಹರಟೆ ಮಾತುಗಳಿಂದ ತುಂಬಿದ ಜೀವಿತ :–** ಅನೇಕರಿಗೆ ಇನ್ನೊಬ್ಬರ ಬಗ್ಗೆ ಮಾತನಾಡುವುದೆಂದರೆ ಬಹಳ ಖುಷಿ ಆದರೆ ಅದರಿಂದ ಏನೆಲ್ಲಾ ಸಮಸ್ಯೆಗಳು ತಮಗೆ ಬರುತ್ತವೆಂದು ಯಾರೂ ಕೂಡ ಯೋಚನೆ ಮಾಡುವುದಿಲ್ಲ. "ನನ್ನ ನಾಲಿಗೆ ಪಾಪಕ್ಕೆ ಹೋಗದಂತೆ ಜಾಗರೂಕನಾಗಿರುವೆನು; ದುಷ್ಟರು ನನ್ನ ಮುಂದೆ ಇರುವಾಗ ಬಾಯಿಗೆ ಕೊಕ್ಕೆ ಹಾಕಿಕೊಂಡಿರುವೆನು" (ಕೀರ್ತ. 39:1). "ಪ್ರಾಪಂಚಿಕವಾದ ಆ ಹರಟೆ ಮಾತುಗಳಿಗೆ ದೂರವಾಗಿರು; ಅವುಗಳಿಗೆ ಮನಸ್ಸು ಕೊಡುವವರು ಹೆಚ್ಚೆಚ್ಚಾಗಿ ಭಕ್ತಿಹೀನರಾಗುವರು" (2 ತಿಮೊ. 2:16).

3) **ಹಿಂಜಾರುವಿಕೆ ಅಂದರೇನು? ಹಿಂಜಾರುವಿಕೆ ಅಂದರೆ ಅರ್ಥ ಭ್ರಷ್ಟರಾಗುವುದು** (ಜ್ಞಾನೋ. 14:14, ಯೆಶಾ. 14:4). ಭ್ರಷ್ಟರಾಗುವುದೆಂದರೇನು

1) ನಂಬಿಕೆಯಿಂದ ತಪ್ಪಿ ಹೋಗುವುದು

2) ನಂಬಿಕೆಯಲ್ಲಿ ಬಿದ್ದು ಹೋಗುವುದು

3) ನಂಬಿಕೆಯನ್ನು ಕಳಕೊಳ್ಳುವುದು

4) ನಂಬಿಕೆಯ ಜೀವಿತವನ್ನು ಬಿಟ್ಟು ಹೋಗುವುದು

5) ನಂಬಿಕೆಯ ಜೀವಿತದ ಗುರಿ ತಪ್ಪುವುದು

6) ದೇವರಿಂದ ಅಗಲಿ ಹೋಗುವುದು

7) ದೇವರಲ್ಲಿರುವ ನಂಬಿಕೆಯನ್ನು ಕಳಕೊಳ್ಳುವುದು.

4) **ಹಿಂಜಾರುವಿಕೆ ಅಂದರೇನು (ಹೋಶೆ. 11:7) ದೇವರ ಕಡೆಯಿಂದ ತಿರುಗಿಕೊಳ್ಳುವುದು**

1) ಗುರಿ ತಪ್ಪುವುದು

2) ದೇವರನ್ನು ಬಿಟ್ಟು ಬಿಡುವುದು

3) ದೇವರಿಗೆ ವಿರೋಧವಾಗಿ ಹೋಗುವುದು

4) ದೇವರ ಮಾರ್ಗ ಬಿಡುವುದು

5) ದೇವರ ಆಲೋಚನೆ ಕೇಳದಿರುವುದು

6) ದೇವರ ಸಾನಿಧ್ಯ ಕಳಕೊಳ್ಳುವುದು

7) ದೇವರ ಸಂಬಂಧ ಕಳಕೊಳ್ಳುವುದು.

5) **ಹೋಶೆ. 4:16 ಮೊಂಡುತನದ ನಡೆ (ಹಿಂಜಾರುವಿಕೆಯ ಅರ್ಥ)**

1) ಅವಿಧೇಯತೆ

2) ಹಟಮಾರಿತನದ ಸ್ವಭಾವ

3) ಸ್ವಂಥ ಇಷ್ಟ ಪ್ರಕಾರವಾದ ಜೀವಿತ

4) ದೈವೀಕ ಆಲೋಚನೆ ಸ್ವೀಕರಿಸದೆ ನಡೆಯುವುದು

5) ತಿದ್ದಿ ಕೊಳ್ಳದಿರುವುದು

6) ಕ್ರಮವಿಲ್ಲದ ಜೀವಿತ.

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**

**ಡಿಜಿಎಮ್ ಬೇತೇಲ್ ಚರ್ಚ್ ಟ್ರಸ್ಟ್ (ರಿ)**
ಇದರ ವತಿಯಿಂದ ಆರಂಭಗೊಂಡಿರುವ ನೂತನ ಟಿವಿ ಚಾನೆಲ್
**ಆಸರೆ 24X7**
**ಸುವಾರ್ತೆಯೊಂದಿಗೆ ಸಮಾಜ ಸೇವೆ**
*Digital Set Top Box No. 894, Cable TV No.48*
**ಡಿಜಿಎಮ್ ಬಿಸಿ ಟ್ರಸ್ಟ್ (ರಿ),** ಬೇತೇಲ್ ಚರ್ಚ್ ರಸ್ತೆ, ಇನ್ನಂಜೆ ಗ್ರಾಮ,
ಯೇಸುಪುರ, ಶಂಕರಪುರ, ಉಡುಪಿ – 574115, ಕರ್ನಾಟಕ.
ದೂರವಾಣಿ ಸಂಖ್ಯೆ: 9902334941, 9844265602, 0820 2559202, 0820 2589070

ಮುರಿದ ಮನಸ್ಸುಳ್ಳವರಿಗೆ ಯೆಹೋವನು ನೆರವಾಗುತ್ತಾನೆ, ಕುಗ್ಗಿಹೋದವರನ್ನು ಉದ್ಧಾರ ಮಾಡುತ್ತಾನೆ (ಕೀರ್ತ. 34:18).

## ವಿಶೇಷ ಸೂಚನೆ

ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : **0091–820 2002781, 0091–9902334941, 0091–9964070654, 0091–820 2559712.**

---

## ಡಿಜಿಎಮ್ ಬೇತೇಲ್ ಇಂಟರ್ ನ್ಯಾಷನಲ್
## ಆಂಗ್ಲ ಮಾಧ್ಯಮ ಶಾಲೆಗೆ ಬೇಕಾದ ಅವಶ್ಯಕತೆಗಳು :

- **ಶಿಶು ವಿಹಾರಕ್ಕೆ ಬೇಕಾಗುವ ಆಟದ ಸಾಮಗ್ರಿಗಳು**
- **ನೋಟ್ ಬುಕ್ಸ್**
- **ಡೆಸ್ಕ್ ಮತ್ತು ಕುರ್ಚಿಗಳನ್ನು ಕೊಡಲು ಇಚ್ಛಿಸುವ ದಾನಿಗಳು**

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ

**0091 820 2002781, 0091 9902334941**


---




## ನಮ್ಮೊಂದಿಗೆ ಆಚರಿಸಿ



ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 0091 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.



## ಮಕ್ಕಳ ಸ್ವರ

1) ನಾನು ನನ್ನ ಮನೆಯವರು ಯೆಹೋವನನ್ನೇ ಸೇವಿಸುವೆವು ಎಂದು ಯಾರು ಹೇಳಿದರು?

2) ಮನುಷ್ಯನು ಹೊರಗಿನ ತೋರಿಕೆಯನ್ನು ನೋಡುತ್ತಾನೆ ಆದರೆ ದೇವರು ಹೃದಯವನ್ನು ನೋಡುತ್ತಾನೆ ಇದನ್ನು ಯಾರು ಯಾರಿಗೆ ಹೇಳಿದರು?

3) ಬಿಳಾಮನು ಸವಾರಿ ಮಾಡಿದ ಪ್ರಾಣಿ ಯಾವುದು?

4) ಜಕ್ಕಾಯನು ಯಾವ ಮರದ ಮೇಲೆ ಕುಳಿತಿದ್ದನು?

5) ಹೋರೆಬ್ ಎಂಬುದು ಏನು?

6) ಸೆರೆಮನೆಯ ವಾಸವನ್ನು ಅನುಭವಿಸಿದ ಮೂರು ವ್ಯಕ್ತಿಗಳು ಯಾರು?

7) ಯಾಕೋಬನ ಅಜ್ಜಿಯ ಹೆಸರೇನು?

8) ಹಳೆ ಒಡಂಬಡಿಕೆಯ ಮೂರು ಪ್ರವಾದಿಗಳು ಯಾರು?

9) ಉಷ್ಟ್ರಪಕ್ಷಿಗಳ ಗೆಳಯಾಗಿದ್ದೇನೆಂದು ಹೇಳಿದವರು ಯಾರು?

10) ಯೇಸುಕ್ರಿಸ್ತನು ಯಾರಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು?

**ಡಿಸೆಂಬರ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು**

1. ದಾವೀದ
2. ಹನ್ನೊಂದು
3. ಆದಾಮ ಮತ್ತು ಹವ್ವ
4. ರೂತ
5. ಲೋಟ
6. ಬೆನ್ಯಮೀನ್
7. ಫರೋಹನ ಮಗಳು
8. ಸೀನಾಯಿ ಬೆಟ್ಟದಲ್ಲಿ
9. ವಿವೇಕವನ್ನು
10. ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ್ದು.

# ಪ್ರಾರ್ಥನಾ ಸ್ವರ

**ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.**

**ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.**

**ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)**

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0091 820 2559886**

ಯೆಹೋವನು ನೀತಿವಂತರ ಕೂಗನ್ನು ಕೇಳಿ ಎಲ್ಲಾ ಕಷ್ಟಗಳಿಂದ ಅವರನ್ನು ಬಿಡಿಸುತ್ತಾನೆ.
(ಕೀರ್ತ. 34:17).